7) ನಿಲುವಳಿ ಸೂಚನೆ

ವಿಷಯ: ರಾಜ್ಯದಲ್ಲಿ ನಕಲಿ ಸ್ಟ್ಯಾಂಪ್ ಪೇಪರ್ ಹಗರಣ ಕುರಿತು ಚರ್ಚೆಗೆ ಒತ್ತಾಯ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ರಾಜ್ಯದಲ್ಲಿ ಸುಮಾರು 10 ಕೋಟಿ ರೂಪಾಯಿಗಳ ನಕಲಿ ಛಾಪಾ ಕಾಗದಗಳು ಮಾರಾಟವಾಗಿರತಕ್ಕಂಥ ಪ್ರಕರಣ ಹೊರಕ್ಕೆ ಬಂದಿದೆ. ಆದ್ದರಿಂದ ಇದರ ಬಗ್ಗೆ ನಿಲುವಳಿ ಸೂಚನೆಯನ್ನು ಈ ಸಂದರ್ಭದಲ್ಲಿ ಮಂಡನೆ ಮಾಡುತ್ತಿದ್ದೇನೆ. ಈ ಒಂದು ಪ್ರಕರಣದಲ್ಲಿ ಬಹಳ ಪ್ರಭಾವ ಇರತಕ್ಕಂಥ ರಾಜಕೀಯ ವ್ಯಕ್ತಿಗಳು ಹಾಗೂ ಇನ್ನೂ ಇತರೇ ಅಧಿಕಾರಿಗಳು ಸೇರಿಕೊಂಡಿದ್ದಾರೆ. ಇದು ಬಹಳ ಪ್ರಮುಖವಾಗಿರುವುದರಿಂದ ಇದಕ್ಕೆ ಸಂಬಂಧಪಟ್ಟಂತೆ ಕೆಲವೊಂದು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಆದ್ದರಿಂದ ನಾನು ಸಬ್‌ಮಿಷನ್ ಮಾಡುವುದಕ್ಕೆ ಮೊದಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಮಾನ್ಯ ಕಾನೂನು ಸಚಿವರು ಸಭೆಯ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತಿದ್ದಾರೆ. ಆದ್ದರಿಂದ, ಮೊದಲು ಅವರಿಗೆ ಅವಕಾಶ ಕೊಡೋಣ.

ಶ್ರೀ ಜಗದೀಶ್ ಶೆಟ್ಟರ್: ನಾನು ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸಬ್‌ಮಿಷನ್ ಮಾಡುತ್ತೇನೆ. ಅನಂತರ ಮಾನ್ಯ ಕಾನೂನು ಸಚಿವರು ಮಾತನಾಡಲಿ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದೇನೆಂದರೆ, In the High Court of Karnataka - Writ Petition No.44342/2001 is pending before the High Court for adjudication on the same matter-on the same matter. ಆದ್ದರಿಂದ ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಉಚ್ಚ ನ್ಯಾಯಾಲಯದ ಮುಂದೆ ಇರತಕ್ಕಂಥ ಪ್ರಸಂಗವನ್ನು ಈ ಸದನದಲ್ಲಿ ಚರ್ಚೆ ಮಾಡುವುದರಿಂದ, ಸದನದಲ್ಲಿ ನಾವು ಹಾಕಿಕೊಂಡಿರತಕ್ಕಂಥ ನಿಯಮಾವಳಿಗಳು ಏನಿವೆ, ಅದರ ಪ್ರಕಾರ ಇದು ಸಬ್ ಜುಡೀಸ್ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಚರ್ಚೆ ಮಾಡುವುದಕ್ಕಿಂತ ಮುಂಚಿತವಾಗಿ ಚಿಂತನೆ ಮಾಡಬೇಕೆಂಬುದು ನನ್ನ ಮನವಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ರಿಟ್ ಪೆಟಿಶನ್ ಪೆಂಡಿಂಗ್ ಇರುವುದರಿಂದ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಕಾನೂನು ಸಚಿವರಾದ ಮಾನ್ಯ ಚಂದ್ರೇಗೌಡರು ಹೇಳುತ್ತಿದ್ದಾರೆ. ನಾನು ಸಬ್‌ಮಿಷನ್ ಮಾಡತಕ್ಕಂಥದ್ದು ಏನೆಂದರೆ, ಇವತ್ತು ನಕಲಿ ಸ್ಟ್ಯಾಂಪ್

ಪೇಪರ್ ಬಗ್ಗೆ ಸರ್ಕಾರದ ಜವಾಬ್ದಾರಿ ಕೂಡ ಇರುತ್ತದೆ. ನಮ್ಮ ರಾಜ್ಯಕ್ಕೆ ಬರತಕ್ಕಂಥ ಆದಾಯ ಕೂಡ ಇದರಿಂದ ಕಡಿಮೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಎಲ್ಲಿಯವರೆಗೆ ಬಂದಿದೆ ಮತ್ತು ಇದರಲ್ಲಿ ಯಾರ್‍ಯಾರು ಸೇರಿದ್ದಾರೆ ಎನ್ನತಕ್ಕಂಥದ್ದನ್ನು ನಾವು ಕೇಳುತ್ತಿದ್ದೇವೆ. ರಾಜ್ಯದ ಆಡಳಿತ ವ್ಯವಸ್ಥೆ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ಮತ್ತು ನಾವು ಈಗಾಗಲೇ ಹೇಳಿದ ಹಾಗೆ ಇದರಲ್ಲಿ ಯಾರ್‍ಯಾರು ಸೇರಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಇನ್‌ವೆಸ್ಟಿಗೇಷನ್ ಆಗಬೇಕೆಂಬುದರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಬಹುಶಃ ರಿಟ್ ಪೆಟಿಷನ್‌ನಲ್ಲಿ ಯಾವ ಪ್ರೇಯರ್ ಇದೆ ಮತ್ತು ಅಲ್ಲಿ ಯಾವ ವಿಷಯ ಇದೆ ಎಂಬುದೂ ಕೂಡ ನಮಗೆ ಗೊತ್ತಿಲ್ಲ. ಬಹುಶಃ ನನಗೆ ತಿಳಿದ ಮಟ್ಟಿಗೆ ಇದಕ್ಕೆ ಸಂಬಂಧಪಟ್ಟಂತೆ ಮೆರಿಟ್ ಮೇಲೆ ಈ ವಿಷಯ ಡಿಸೈಡ್ ಆಗುತ್ತದೆ. ಇಲ್ಲಿ ನಾವು ವಿಧಾನಸಭೆಯಲ್ಲಿ ಚರ್ಚೆ ಮಾಡಬೇಕಾದ ವಿಷಯ. 10 ಸಾವಿರ ಕೋಟಿ ರೂಪಾಯಿಗಳ ನಕಲಿ ಸ್ಟ್ಯಾಂಪ್ ಪೇಪರ್ ಪ್ರಿಂಟ್ ಮಾಡಿ ಮಾರಾಟ ಮಾಡಿರತಕ್ಕಂಥದ್ದು. ಈ ಒಂದು ದೊಡ್ಡ ಹಗರಣದ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಪೊಲೀಸ್ ಕಮಿಷನರ್ ಹೇಳಿರತಕ್ಕ ಇನ್‌ವೇಸ್ಟಿಗೇಷನ್ ಮತ್ತಿತರ ಸಾಕಷ್ಟು ವಿಷಯಗಳು ಪತ್ರಿಕಾ ಗೋಷ್ಠಿಯಲ್ಲಿ ಪ್ರಸ್ತಾಪವಾಗಿದೆ. ಆದ್ದರಿಂದ ಇದರ ಬಗ್ಗೆ ನಾವೂ ಕೂಡ ಕೂಲಂಕಷವಾಗಿ ಚರ್ಚೆ ಮಾಡಬೇಕಾಗುತ್ತದೆ. ಇದು ಕೇವಲ ಜುಡಿಶಿಯರಿಯಿಂದ ನಿರ್ಣಯ ಆಗತಕ್ಕಂಥದ್ದಲ್ಲ. ಇವತ್ತಿನ ದಿವಸ ಇದರಲ್ಲಿ ಅಡ್ಮಿನಿಸ್ಟ್ರೇಷನ್‌ವಿಷಯ ಬರುವುದರಿಂದ ಇಲ್ಲಿ ಸಬ್-ಜ್ಯುಡೀಸ್ ಎನ್ನತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ನಿಮ್ಮ ಪ್ರಕಾರ ಯಾವುದಾದರೊಂದು ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾರಾದರು ಕೋರ್ಟ್‌ಗೆ ಹೋದರೆ, ಸಂಬಂಧಪಟ್ಟಂಥ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೇ ಹೇಗೆ? ಈ ಸದನದಲ್ಲಿ ಚರ್ಚೆ ಮಾಡತಕ್ಕಂಥ ವಿಷಯ ಏನೆಂದರೆ, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕಂಥ ನಿಲುವು ಏನು? ಹಾಗೆಯೇ ಇದರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ? ಹಾಗೆಯೇ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಆಗಿರತಕ್ಕಂಥ ಇನ್‌ವೆಸ್ಟಿಗೇಷನ್ ಸಾಕೆ ಅಥವಾ ಇದಕ್ಕೆ ಸಂಬಂಧಪಟ್ಟಂತೆ ಸಿ.ಬಿ.ಐ. ಎನ್‌ಕ್ವೈಯರಿ ಆಗಬೇಕೆ ಅಥವಾ ಬೇಡವೇ ಇದಕ್ಕೆ ಸಂಬಂಧಪಟ್ಟಂಥ ರಾಜಕೀಯ ವ್ಯಕ್ತಿಗಳು ಯಾರು ಇದ್ದಾರೆ? ಹಾಗೆಯೇ ಇದಕ್ಕೆ ಸಂಬಂಧಪಟ್ಟ ಆರೋಪಿಗಳ ಹಿನ್ನಲೆ ಏನು? ಆರೋಪಿಯ ಸುತ್ತಮುತ್ತಲು ಯಾವ್ಯಾವ ಜನರಿದ್ದಾರೆ? ಯಾವ್ಯಾವ ರಾಜ್ಯದಲ್ಲಿ ಈ ರಾಕೆಟ್ ಹರಡಿದೆ? ಹಾಗೆಯೇ ನಮ್ಮ ರಾಜ್ಯದಲ್ಲಿ ನಕಲಿ ಸ್ಟ್ಯಾಂಪ್ ಪೇಪರ್ ಅವ್ಯವಹಾರ ಎಲ್ಲೆಲ್ಲಿ ನಡೆದಿದೆ? ಇದರ ಬಗ್ಗೆ ಇವತ್ತಿನ ದಿವಸ ಕೂಲಂಕಷವಾಗಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ಕರ್ನಾಟಕ ಹೈ ಕೋರ್ಟ್‌ನಲ್ಲಿ ಈ ಒಂದು ವಿಷಯಕ್ಕೆ ಸಂಬಂಧಪಟ್ಟಂಥ ಕೇಸ್ ಪೆಂಡಿಂಗ್ ಇರುವುದರಿಂದ ಇದು ಸಬ್-ಜ್ಯುಡೀಸ್ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಬರುವುದಿಲ್ಲ. ಈ ವಿಷಯದ ಬಗ್ಗೆ ನಾವು ಹೆಚ್ಚು ಚರ್ಚೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ತಾವು ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕು. ಇದು ಬಹಳ ಪ್ರಮುಖವಾದ ವಿಷಯ, ಇದು ಬಹಳ ಗಂಭೀರವಾದ ವಿಷಯ, ಇಂಥದ್ದನ್ನು ನಾವು ಈ ಸದನದಲ್ಲಿ ಚರ್ಚೆ ಮಾಡದೇ ಹೋದರೆ ಜನರಿಗೆ

ನಿಜವಾದ ಒಂದು ವಸ್ತುಸ್ಥಿತಿಯನ್ನು ತಿಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಸರ್ಕಾರ ಯಾವ ರೀತಿಯಾಗಿ ನಡೆಯುತ್ತಿದೆ, ಎಂತಹ ಪರಿಸ್ಥಿತಿಯಲ್ಲಿ ಇವತ್ತು ನಡೆಯುತ್ತಿದೆ, ಎಂತಹ ಅವ್ಯವಹಾರಗಳು ನಡೆಯುತ್ತಿವೆ, ಎಂಬುದನ್ನು ನಾವು ಕೇಳುತ್ತಿದ್ದೇವೆ. ಇವತ್ತು ಕೇವಲ 10-20-30 ಕೋಟಿ ರೂಪಾಯಿಗಳ ಹಗರಣವನ್ನು ನಾವು ಕೇಳುತ್ತಿದ್ದೇವೆ. ಒಂದು ಬಿಗ್ ಸ್ಕ್ಯಾಮ್ ನಡೆಯುತ್ತಿದೆ. ಇಂತಹ ಬಿಗ್ ಸ್ಕ್ಯಾಮ್ ಬೇರೆ ಎಲ್ಲೂ ನಡೆದಿಗಲಿಕ್ಕಿಲ್ಲ. 10 ಸಾವಿರ ಕೋಟಿ ರೂಪಾಯಿಗಳ ನಕಲಿ ಸ್ಟ್ಯಾಂಪ್ ಪೇಪರ್ ಪ್ರಿಂಟ್ ಮಾಡಿದ್ದು ಹಾಗೂ ಮಾರಾಟ ಮಾಡಿದ್ದು ಇದೆ. ಮಾನ್ಯ ಕಂದಾಯ ಮಂತ್ರಿಗಳ ಒಂದು ಕಡೆ ಹೇಳಿದ್ದಾರೆ. ನಕಲಿ ಸ್ಟ್ಯಾಂಪ್ ಪೇಪರ್ ಯಾವುದು, ಅಸಲಿ ಸ್ಟಾಂಪ್ ಪೇಪರ್ ಯಾವುದು ಎನ್ನುವುದು ಗೊತ್ತಾಗುತ್ತಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಚರ್ಚೆಯನ್ನು ಮಾಡುವುದು ಬೇಡವೆ? ಮಾನ್ಯ ಶ್ರೀಕಂಠಯ್ಯನವರು ಒಂದು ಕಡೆ ಹೇಳಿದರು, ಅಸಲಿ ಮತ್ತು ನಕಲಿ ಸ್ಟ್ಯಾಂಪ್ ಪೇಪರ್ ಯಾವುದು ಎಂದು ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರೆ, ನಾನು ರಾಜೀನಾಮೆ ಕೊಡುತ್ತೇನೆ ಎಂದು ಮೊನ್ನೆ ಹಾಸನದಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಅಸಲಿ ಹಾಗೂ ನಕಲಿ ಸ್ಟ್ಯಾಂಪ್ ಪೇಪರ್ ಯಾವುದು ಎನ್ನುವುದು ಗೊತ್ತಾಗದಿದ್ದರೆ, ಕಳೆದ ವರ್ಷ 12 ಕೋಟಿ ರೂಪಾಯಿಗಳ ನಕಲಿ ಸ್ಟಾಂಪ್ ಪೇಪರ್‌ಗಳು ಸಿಕ್ಕಿದಾಗಲೇ ಸರ್ಕಾರ ಅದನ್ನು ಸೀಜ್ ಮಾಡಬೇಕಾಗಿತ್ತು. 12 ಕೋಟಿ ರೂಪಾಯಿಗಳ ನಕಲಿ ಸ್ಟ್ಯಾಂಪ್ ಪೇಪರ್ ಎನ್ನುವುದು ನಿಮಗೆ ಹೇಗೆ ಗೊತ್ತಾಯಿತು? ಮಾನ್ಯ ಶ್ರೀಕಂಠಯ್ಯನವರು ಒಂದು ಪತ್ರಿಕಾ ಹೇಳಿಕೆಯಲ್ಲಿ ಅಡ್ಮಿಟ್ ಮಾಡಿದ್ದಾರೆ, 10 ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಸರ್ಕಾರಕ್ಕೆ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಪ್ರಶ್ನೆ ಇರುವುದು, ರಾಜ್ಯ ಸರ್ಕಾರದ ಆದಾಯ ಕಡಿಮೆಯಾಗಿದೆ. ಇಂತಹ ಆರೋಪಗಳು ಇಡೀ ರಾಜ್ಯಾದ್ಯಂತ ಇರುವಾಗ ದೊಡ್ಡ ಪ್ರಮಾಣದಲ್ಲಿ ಕಾಯಿದೆ ವಿರುದ್ಧ ಚಟುವಟಿಕೆಗಳನ್ನು ನಡೆಸಿಕೊಂಡು ಹೋದರೆ, ಇದರ ಬಗ್ಗೆ ನಾವು ಚರ್ಚೆಯನ್ನು ಮಾಡುವುದು ಬೇಡವೆಂದರೆ, ಸದನಕ್ಕೆ ಇರುವ ಗೌರವ ಏನು? ಇಂತಹ ವಿಷಯಗಳು ಸದನದಲ್ಲಿ ಚರ್ಚೆಯಾಗುವುದು ಬೇಡವೆ? ಇದರ ಬಗ್ಗೆ ನಾವು ಇವತ್ತು ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗಿದೆ. ಇದು ಸಬ್‌ಜುಡೀಸ್ ಆಗುವುದಿಲ್ಲ ಎನ್ನುವುದನ್ನು ತಾವೂ ಹೇಳಿ ದಯಮಾಡಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ವಾಸ್ತವಿಕ ಅಂಶಗಳನ್ನು ತಮ್ಮ ಗಮನಕ್ಕೆ ತಂದೆ. ತಾವೇನಾದರೂ ಒಂದು ತೀರ್ಪು ಹೇಳಬೇಕಲ್ಲಾ.

ಅಧ್ಯಕ್ಷರು: ನಾನು ರೂಲಿಂಗ್ ಕೊಡುತ್ತೇನೆ, ಅವರು ಸಬ್‌ಜುಡೀಸ್ ಆಗುವುದಿಲ್ಲವೆಂದು ಹೇಳಿದ್ದಾರೆ, ಅವರು ಡಿಟೇಲ್ ಏನೂ ಹೇಳಿರುವುದಿಲ್ಲ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ನಿಮಗೆ ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮೊದಲನೆಯದಾಗಿ ಅಭಿನಂದಿಸುತ್ತೇನೆ. ಕಾರಣ, ನಿನ್ನೆ ನಡೆದಿರುವ ಬಿಸಿನೆಸ್

ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆ ಎಂಬುದನ್ನು ಈಗ ಆಡಳಿತ ಪಕ್ಷದಲ್ಲಿರತಕ್ಕಂಥ ಜನ ಸ್ವಲ್ಪ ಕಿವಿ ಕೊಟ್ಟು ಕೇಳುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೆಲವು ತೀರ್ಮಾನಗಳನ್ನು ನಾವು ಮಾಡಿದೆವು. ಅದರ ಪ್ರಕಾರ ಇವತ್ತು ಸದನ ನಡೆದಿರುವ ಬಗ್ಗೆ ನಾನು ಹರ್ಷ ವ್ಯಕ್ತ ಮಾಡುತ್ತೇನೆ. ಏಕೆಂದರೆ, ತಾವು ಅನೇಕ ಸದಸ್ಯರುಗಳಿಗೆ ಪ್ರತಿಪಕ್ಷದ ನಾಯಕರುಗಳಿಗೆ ಪತ್ರವನ್ನು ಬರೆದಿರುತ್ತೀರಿ. ಹೊಸದಾಗಿ ಬಂದಿರುವ ಹಿಂದುಗಡೆ ಕುಳಿತಿರುವಂತಹ ಸದಸ್ಯರುಗಳಿಗೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುತ್ತಿಲ್ಲ. ಕೊನೆಯದಾಗಿ ಪ್ರಶ್ನೋತ್ತರ ವೇಳೆ ಚೆನ್ನಾಗಿ ನಡೆಯಬೇಕು, ಆ ಪ್ರಕಾರ ಇವತ್ತು ನಡೆದಿದೆ. ಮೊದಲನೆಯದಾಗಿ, ಇದರ ಬಗ್ಗೆ ನನಗೆ ಹರ್ಷವಾಗಿದೆ. ನಾನು ಸುತ್ತುಬಳಸಿ ವಿಷಯವನ್ನು ಪ್ರಸ್ತಾಪ ಮಾಡುವುದರ ಬದಲಾಗಿ, ಸದನದಲ್ಲಿ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ.. ನಮಗೆ ಚರ್ಚೆ ಮಾಡಲು ಅವಕಾಶ ಇರತಕ್ಕಂಥದ್ದು ಕೇವಲ 7 ದಿವಸಗಳ ಕಾಲ ಮಾತ್ರ ಬಹುಶಃ ಒಂದು ದಿವಸ ಮುಂದೆ ಹೋದರೆ ಮುಂದಿನ ತಿಂಗಳು ಒಂದನೇ ತಾರೀಖಿನವರೆಗೂ ಆಗಬಹುದು. ಒಟ್ಟಿನಲ್ಲಿ 7 ದಿವಸಗಳು ಡಿಸ್‌ಕಷನ್‌ಗೆ ಉಳಿಯುತ್ತದೆ. ರಾಜ್ಯಪಾಲರು ಒಂದು ಗಂಟೆ ಕಾಲ ಮಾಡಿದ ಭಾಷಣದ ಬಗ್ಗೆ ಅನೇಕ ವಿಚಾರಗಳ ಬಗ್ಗೆ ನಾವು ಮಾತನಾಡಬೇಕಾಗಿದೆ. ಎಲ್ಲರೂ ಸಹಿತ ಮಾತನಾಡಬೇಕಾಗಿದೆ. ನಾವು ಬಹಳ ಪ್ರಮುಖವಾಗಿ ಈ ಸದನದಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ನಾವು ಬಯಸಿರುತ್ತೇವೆ. ನಾವು ನಿಲುವಳಿ ಸೂಚನೆಯನ್ನು ಇವತ್ತು ಕಳುಹಿಸಿರುತ್ತೇವೆ. ನಿಲುವಳಿ ಸೂಚನೆಯಲ್ಲಿ ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಇಡೀ ರಾಜ್ಯದಲ್ಲಿ, ರಾಜ್ಯ ಸರ್ಕಾರ ಕಳೆದ ಬಜೆಟ್ ಅಧಿವೇಶನದಲ್ಲಿ ಮುಖ್ಯಮಂತ್ರಿಗಳಾಗಿ ಮತ್ತು ಹಣಕಾಸಿನ ಮಂತ್ರಿಗಳಾಗಿ ಈ ಸದನದ ಹಕ್ಕುಚ್ಯುತಿಯನ್ನು ಮಾಡಿದ್ದಾರೆ. ರೈತರಿಗೆ, ಗ್ರಾಮೀಣ ಪ್ರದೇಶದ ಜನರಿಗೆ ರಾತ್ರಿಹೊತ್ತು ನಿರಂತರವಾಗಿ ವಿದ್ಯುತ್‌ನ್ನು ಸರಬರಾಜು ಮಾಡುತ್ತೇವೆ ಎನ್ನುವ ಮಾತನ್ನು ಕೊಟ್ಟು ಅದರ ಉಲ್ಲಂಘನೆಯನ್ನು ಮಾಡಿದ್ದಾರೆ. ರೈತರು ಬಹಳ ಕಷ್ಟದಲ್ಲಿದ್ದಾರೆ, ಅವರ ಬೆಳೆಗಳು ಸಂಪೂರ್ಣವಾಗಿ ನಾಶವಾಗಿದೆ. ಅವರ ಬೆಳೆಗಳಿಗೆ ಬೆಲೆ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ, ಅದರಿಂದ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ನಮ್ಮ ಪಕ್ಷದಿಂದ ನಾವು ನಿಲುವಳಿ ಸೂಚನೆಯನ್ನು ಕೊಟ್ಟು, ಇವತ್ತಿನ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ಅದನ್ನು ತೆಗೆದುಕೊಳ್ಳಬೇಕು ಅದರ ಬಗ್ಗೆ ಚರ್ಚೆಯಾಗಬೇಕು ಎನ್ನುವ ಬಗ್ಗೆ ನಾವು ಹೇಳಿರುತ್ತೇವೆ. ತಾವು ದಯವಿಟ್ಟು ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಒತ್ತಾಯವನ್ನು ಮಾಡಿ, ನಿಯಮ 69ರ ಅಡಿಯಲ್ಲಿ, ಇವತ್ತು ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಮಾನ್ಯ ಖರ್ಗೆಯವರು ಈ ಕಡೆ ಸ್ವಲ್ಪ ಗಮನವನ್ನು ಕೊಟ್ಟು ಕೇಳಬೇಕು. ನಮ್ಮ ಪೊಲೀಸ್ ಇಲಾಖೆಯ ಬಗ್ಗೆ ನಾನು ಆಗಾಗ ಒಳ್ಳೆಯ ಮಾತುಗಳನ್ನು ಹೇಳುತ್ತಿರುತ್ತೇನೆ. ಹಿಂದೆ ಜವಾಬ್ದಾರಿಯಿಂದ ಆ ಇಲಾಖೆಯನ್ನು ನಾವು ನಡೆಸಿರುವವರು, ತಾವೂ ಕೂಡ ಅಷ್ಟೇ ಜವಾಬ್ದಾರಿಯಿಂದ ನಡೆಸುತ್ತಿದ್ದೀರಿ. ಆದರೆ ಒಂದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಖೋಟಾ ಛಾಪಾ ಕಾಗದದ ಅವ್ಯವಹಾರ ಇದು ಕೇವಲ ಒಂದು ಜಿಲ್ಲೆಗೆ, ರಾಜ್ಯಕ್ಕೆ ಮತ್ತು ಒಂದು ರಾಷ್ಟ್ರಕ್ಕೆ ಸೀಮಿತವಾಗಿರತಕ್ಕಂಥ ಒಂದು ಜಾಲ ಅಲ್ಲ. ಇಡೀ ಜಾಲ ರಾಷ್ಟ್ರದ ಮತ್ತು ಅನೇಕ ರಾಜ್ಯಗಳಲ್ಲಿ

ನಮ್ಮ ಪಕ್ಷದ ರಾಷ್ಟ್ರದ ಅನೇಕ ರಾಜ್ಯಗಳಲ್ಲಿ ಹಬ್ಬಿಕೊಂಡಿರತಕ್ಕಂಥ ಒಂದು ಜಾಲ ಇದು. ಇದರ ಸಂಶಯದ ಕತ್ತಿ ಅನೇಕರ ಕಡೆ ಇದೆ. ಈ ದೃಷ್ಟಿಯಿಂದಾಗಿ ನಮ್ಮ ಪೊಲೀಸರು ಕೆಲವು ವಿಚಾರಗಳನ್ನು ಮಾಡಿದ್ದಾರೆ. ನಾನು ಒತ್ತಾಯ ಮಾಡುತ್ತಿರುವುದು ಇವತ್ತಿನ ಚರ್ಚೆಯಲ್ಲಿ, I am not going into the details. You have been very magnanimous enough, kind enough. ತಾವು ಒಳ್ಳೆಯ ಊಟವನ್ನು ಹಾಕಿಸಿರುತ್ತೀರಿ. ಎಲ್ಲರ ಸಹಕಾರವನ್ನು ಕೇಳುತ್ತಿದ್ದೀರಿ. ನಗುನಗುತ್ತಾ ಎಲ್ಲವನ್ನೂ ನೀವು ಮಾಡುತ್ತಿದ್ದೀರಿ. You please allow us to have a debate. ಇದನ್ನು ಪತ್ತೆ ಹಚ್ಚುವುದರ ಮೂಲಕವಾಗಿ ಪೊಲೀಸರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. We should assist the police. We should assist the government. Our debate and also our discussion should help the police and the government to find out as to who is the real culprit. ಈ ದೃಷ್ಟಿಯಿಂದಾಗಿ ಮಾನ್ಯ ಕಾನೂನು ಸಚಿವರು ಇದರಲ್ಲಿ ಅವರು ಬಹಳ ದೊಡ್ಡ ಪರಿಣಿತರು. ವಿರೋಧ ಪಕ್ಷದ ನಾಯಕರಾಗಿ ಬಹಳ ಸಮರ್ಥವಾಗಿ ಕೆಲಸವನ್ನು ಮಾಡಿದವರು. ಅವರು ಕಾನೂನು ಸಚಿವರಾಗಿ ಕೂಡ ಒಳ್ಳೆಯ ಕೆಲಸವನ್ನು ಮಾಡಲು ಪ್ರಯತ್ನವನ್ನು ಮಾಡುತ್ತಿದ್ದಾರೆ. ಅವರು ಸರ್ಕಾರದ ರಕ್ಷಣೆಗೆ ಹೋಗುತ್ತಿದ್ದಾರೆ. ಅವರಿಗೆ ಮನಸ್ಸಿಲ್ಲದಿದ್ದರೂ ಸಹಿತ ಇದರ ಬಗ್ಗೆ ಚರ್ಚೆಯಾಗಬೇಕು ಎನ್ನುವುದು ಅವರಿಗೆ ಗೊತ್ತಿದ್ದರೂ ಸಹಿತ, ತಾವು ಅವಕಾಶವನ್ನು ಕೊಡುತ್ತೀರಿ ಎನ್ನುವುದು ಗೊತ್ತಿದ್ದರೂ ಸಹಿತ, ಯಾರೋ ಒಬ್ಬರು ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಹಾಕಿದ್ದರ ಬಗ್ಗೆ ಇಲ್ಲಿ ಡಿಬೇಟ್ ಮಾಡತಕ್ಕಂಥದ್ದು ಮೆರಿಟ್ ಆಫ್ ದಿ ಕೇಸ್ ಬೇಡ ಎಂದು ಹೇಳಿದರು. ನಾನು ಬಹಳ ಹೆಮ್ಮೆಯಿಂದ ಈ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಸಹೋದ್ಯೋಗಿಯಾದ ಶ್ರೀ ಸೋಮಶೇಖರ್‌ರವರು ಕಂದಾಯ ಮಂತ್ರಿಗಳಾಗಿ ರಾಜ್ಯದಲ್ಲಿ ಮಾಡಿರತಕ್ಕಂಥ ಕೆಲಸ ಬಹಳ ಉತ್ತಮವಾಗಿರತಕ್ಕಂಥದ್ದು. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದರು, ಕಳೆದ ಅಧಿವೇಶನದಲ್ಲಿ ಇದನ್ನು ಎಲ್ಲಾ ಮಾಡುತ್ತೇವೆ ಎನ್ನುವ ಮಾತನ್ನು ಮಾನ್ಯ ಕಂದಾಯ ಸಚಿವರು ಹೇಳಿದ್ದರು. ಅವರು ಅದನ್ನು ಮಾಡಲಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಚರ್ಚೆಗೆ ಒಂದು ಅವಕಾಶವನ್ನು ಮಾಡಿಕೊಡಬೇಕು, ಮತ್ತು ನಮ್ಮ ನಿಲುವಳಿ ಸೂಚನೆಯನ್ನು ಎತ್ತಿ ಹಿಡಿಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ನಾನು ಮೂರು ಜನರಿಗೆ ಮಾತ್ರ ಮಾತನಾಡಬೇಕೆಂದು ಅವಕಾಶ ಕೊಡುತ್ತೇನೆ. ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

+ ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ತಾವು ಒಂದು ನಿಮಿಷವನ್ನು ತೆಗೆದುಕೊಂಡಿರಿ.

ಅಧ್ಯಕ್ಷರು: ನಾನು ಸಮಯವನ್ನು ತೆಗೆದುಕೊಂಡಿರುವುದಿಲ್ಲ, ನಾನು ಹೇಳುವುದನ್ನು ತಮಗೆ ಹೇಳಬೇಕಲ್ಲವೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ ಈ ಛಾಪಾ ಕಾಗದದ ಹಗರಣ ಏನಿದೆ ಇದನ್ನು ಅತ್ಯಂತ ಗಂಭೀರವಾದ ಹಾಗೂ ಪ್ರಮುಖವಾದ ವಿಚಾರವೆಂದು ಎಲ್ಲರೂ ಮನಗಂಡಿರುತ್ತಾರೆ. ಮಾನ್ಯ ಕಾನೂನು ಸಚಿವರು ಹೈಕೋರ್ಟಿನಲ್ಲಿ ಇದರ ಬಗ್ಗೆ ಕೇಸ್ ಇರುವುದರಿಂದ ಇದು ಸಬ್‌ಜ್ಯುಡೀಸ್ ಆಗುತ್ತದೆ, ಹೈಕೋರ್ಟಿನಲ್ಲಿ ರಿಟ್ ಪೆಂಡಿಂಗ್ ಇದೆ, ಅದಕ್ಕಾಗಿ ಅದನ್ನು ಇಲ್ಲಿ ಡಿಸ್‌ಕಸ್ ಮಾಡಬಾರದೆಂದು ಹೇಳಿದ್ದಾರೆ. ಹೈಕೋರ್ಟ್‌ನಲ್ಲಿರುವ ರಿಟ್ ಪಿಟಿಷನ್ ಏನು? ಅದರಲ್ಲಿ ಅವರ ಬೇಡಿಕೆಗಳು ಏನು? ಅವರ ಹೇಳಿಕೆಗಳು ಏನು? ನಾವು ಇಲ್ಲಿ ಮಾತನಾಡಬೇಕಾದ ವಿಚಾರಗಳು ಏನು ಎನ್ನುವುದರ ಬಗ್ಗೆ ಮಂಡನೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಕೋರ್ಟಿನ ವ್ಯಾಪ್ತಿಗೆ ಬರದಂಥ ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡಬೇಕು ಎಂದು ಹೇಳುವ ಸಂದರ್ಭಗಳನ್ನು ನಾವು ತಯಾರು ಮಾಡಿದರೆ ನಮ್ಮ ಮಾನ್ಯ ಮಂತ್ರಿಗಳು ಕೋರ್ಟಿನಲ್ಲಿ ಕೇಸ್ ಇರುವುದರಿಂದ ಮಾತನಾಡಬಾರದೆನ್ನುವ ಬಗ್ಗೆ ನಮ್ಮ ಬಾಯಿಯನ್ನು ಮುಚ್ಚಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಹಾಗೂ ಸಬ್‌ಜ್ಯುಡೀಸ್ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಇವರಿಗೆ ನಾನು ಒಂದು ಪ್ರಶ್ನೆಯನ್ನು ಹಾಕಲು ಇಚ್ಛೆಪಡುತ್ತೇನೆ. ಸಬ್‌ಜ್ಯುಡೀಸ್ ಎಂದು ಇವರು ಮಾತನಾಡುತ್ತಾರೆ, ನಿನ್ನೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದರು. ರಿಟ್ ಪೆಟಿಷನ್ ಪೆಂಡಿಂಗ್ ಇರುವ ಸಂದರ್ಭದಲ್ಲಿ ಕೂಡ ನಾವು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡುತ್ತೇವೆಂದು ಹೇಳುವ ಇವರ ಔಚಿತ್ಯ ಏನು? ಇಂತಹ ಹಲವಾರು ಕೇಸ್‌ಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ, ಹೈಕೋರ್ಟ್ ಡೀಲ್ ಮಾಡುತ್ತದೆಂದು ಹೇಳುವ ಸಂದರ್ಭದಲ್ಲಿ ಈ ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡುವ ಔಚಿತ್ಯ ಏನು? ಈಗಾಗಲೇ ಇದರ ತನಿಖೆಯನ್ನು ಇನ್ನೊಬ್ಬರಿಗೆ ವರ್ಗಾವಣೆ ಮಾಡಿರುತ್ತೀರಿ. ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಪೆಂಡಿಂಗ್ ಇರುವಾಗ ಇನ್ನೊಬ್ಬನಿಗೆ ತನಿಖೆಗೆ ಏಕೆ ಆದೇಶವನ್ನು ಮಾಡುತ್ತೀರಿ? ಅದನ್ನು ಹೈಕೋರ್ಟ್ ನೋಡುತ್ತಿದೆ. ಆ ಮ್ಯಾಟರ್‌ಗಳ ಬಗ್ಗೆ ಡಿಸ್‌ಕಷನ್ ಮಾಡಬೇಕೆಂದು ಹೇಳಿದರೆ ಹಾಗೂ ಇಂತಹ ವಿಚಾರಗಳನ್ನು ಮಂಡನೆ ಮಾಡಬೇಕೆಂದು ಹೇಳುವ ಸಂದರ್ಭದಲ್ಲಿ, ಸರ್ಕಾರ ಅದನ್ನು ಸಬ್‌ಜ್ಯುಡೀಸ್ ಎಂದು ಹೇಳುತ್ತಿದೆ.

Sri B.N.Bachegowda: I raise a Point of Order. ನಿನ್ನೆ 4 ವಿಶೇಷ ನ್ಯಾಯಾಲಯಗಳನ್ನು ರಚನೆ ಮಾಡಿ, ಕಂಬಾಲಪಲ್ಲಿಗೆ ಒಂದು ನ್ಯಾಯಾಲಯ, ದಂಡುಪಾಳ್ಯದ ಸರಣಿಯ ಕೊಲೆಗೆ ಒಂದು ನ್ಯಾಯಾಲಯ, ಹಾಗೂ ನಕಲಿ ಛಾಪಾ ಕಾಗದದ ಬಗ್ಗೆ ಕೂಡ ಮಾನ್ಯ ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದಾರೆ. ಇವರು ಹೇಳುವಂತೆ ಸಬ್ಜ್ಯುಡೀಸ್ ಆಗುತ್ತದೆನ್ನುವುದಾದರೆ ಈ ಪುಸ್ತಕದಲ್ಲಿ ಈ ಪ್ರಸ್ತಾಪ ಏಕೆ ಬರುತ್ತದೆ? It is a national issue, not confined to the State. Many states have been involved in this scam. ಇದು ನಾನಾ ರಾಜ್ಯಗಳಲ್ಲಿ ಇನ್ವಾಲ್ವ್ ಆಗಿದೆ.

ಅಂತರರಾಷ್ಟ್ರ ಮಟ್ಟದಲ್ಲಿ ಅಂದರೆ ನಮ್ಮ ರಾಷ್ಟ್ರದ ವ್ಯಾಪ್ತಿಯಿಂದ ಹೊರಗಡೆ ಇರುವಂಥವರು, ಇದರಲ್ಲಿ ಶಾಮೀಲಾಗಿದ್ದಾರೆ. ಇದು ಕರ್ನಾಟಕಕ್ಕೆ ಸಿಮೀತವಾಗುವುದಾದರೆ ಇವರು ನ್ಯಾಯಾಲಯವನ್ನು ಮಾಡಲಿ. ರಾಷ್ಟ್ರವ್ಯಾಪ್ತಿ ಜಾಲವಾಗಿರುವುದರಿಂದ ಇದನ್ನು ಸಿಬಿ.ಐ.ಗೆ ಕೊಡಿ ಎನ್ನುವುದನ್ನು ಹೇಳುತ್ತಿದ್ದೇವೆ. It is a big scandal. ಅಂತರಾಷ್ಟ್ರೀಯ ಮಟ್ಟದಲ್ಲಿದೆ ಇದು.

11.40 ಎಎಂ

ಶ್ರೀ ಡಿ.ಬಿ.ಚಂದ್ರೇಗೌಡ: ಸಾವಿರಾರು ಕೋಟಿ ರೂಪಾಯಿಗಳ ಹಗರಣವೆಂದು ಕೂಗಾಡಿದರೆ ಅದು ವಾಪಸ್ಸು ಬರುತ್ತದೆಯೇ?

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಇವರು ಸಬ್‌ಜುಡೀಸ್ ಎಂದು ಹೇಳುತ್ತಾರಲ್ಲಾ, ಅದನ್ನು ಹೇಳಬೇಕೆಂದರೆ, ಆ ವಾದವನ್ನು ಸರ್ಕಾರದವರು ಸದನದ ಮುಂದೆ ಪ್ರತ್ಯಕ್ಷವಾಗಿ ಮಂಡನೆ ಮಾಡಬೇಕು. ಹೈಕೋರ್ಟಿನಲ್ಲಿ ಇಂತಹ ವಿಚಾರಗಳು, ವಾದವಿವಾದಗಳು ಒಳಪಟ್ಟಂತಹ ವಿಚಾರಗಳು ಇವೆ. ಇಲ್ಲಿ ನಮ್ಮ ನಾಯಕರು ಪ್ರಸ್ತಾಪ ಮಾಡುವಂತಹ ವಿಚಾರಗಳು ಅದೇ ವಾದಕ್ಕೆ ಸಂಬಂಧಪಟ್ಟದ್ದು ಆಗಿದೆ. ಏಕೆಂದರೆ, ಅಲ್ಲಿ ಇಲ್ಲದ ವಿಚಾರಗಳನ್ನು ಇಲ್ಲಿ ಮಂಡನೆ ಮಾಡಬೇಕೆನ್ನುವ ಪ್ರಯತ್ನ ಪಡುವಂತಹ ಸಂದರ್ಭಗಳಲ್ಲಿ ತಮ್ಮ ಸರ್ಕಾರದ ರಕ್ಷಣೆಗೋಸ್ಕರ ಇವರು ಏನೇನೋ ವಿಚಾರಗಳನ್ನು ಮಂಡನೆ ಮಾಡಿ ನಮ್ಮ ಬಾಯಿಯನ್ನು ಮುಚ್ಚಿಸುವಂತಹ ಪ್ರಯತ್ನ ಪಟ್ಟಿದ್ದರೆ ಈ ಒಂದು ಸದನದ ಔಚಿತ್ಯವೇನಿತ್ತು? ಇವರು ರಾಜ್ಯಪಾಲರ ಭಾಷಣದಲ್ಲಿ ವಿಶೇಷ ನ್ಯಾಯಾಲಯವನ್ನು ಇದಕ್ಕಾಗಿ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ರಿಟ್ ಪಿಟಿಷನ್ ಪೆಂಡಿಂಗ್ ಇದೆ ಎಂದು ಗೊತ್ತಿದ್ದ ಮೇಲೆ ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡುವಂತಹ ಮನೋಭಾವನೆ ಏಕೆ? ಏತಕ್ಕಾಗಿ ಇದರಿಂದ ಹೊರಹೋಗಬೇಕು ಎಂದು ಹೇಳಿರುವಂತಹದ್ದು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಪೆಂಡಿಂಗ್ ಇರುವಾಗ ಅದು ಸಬ್‌ಜ್ಯುಡೀಸ್ ಆಗುವುದಿಲ್ಲ ಏಕೆಂದರೆ ಅದೇ ವಿಚಾರದ ಬಗ್ಗೆ ಇನ್ನೊಂದು ನ್ಯಾಯಾಲಯವನ್ನು ಸ್ಥಾಪನೆ ಮಾಡುವಂತಹ ಹೇಳಿಕೆಗಳನ್ನು ಮಾಡುವಂಥದ್ದು ಅದರ ಮುಖಾಂತರ ಆ ನ್ಯಾಯಾಲಯದಲ್ಲಿ ಇದನ್ನು ಇತ್ಯರ್ಥ ಮಾಡವಂಥಹದ್ದು, ಮಂಡನೆ ಮಾಡುವಂಥದ್ದು ಎಲ್ಲಾ ನಡೆದಿದೆ. ಅದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ. ಇವರು ಏತಕ್ಕಾಗಿ ಶ್ರೀ ಕುಮಾರ್‌ರವರನ್ನು ಇನ್‌ವೆಸ್ಟಿಗೇಷನ್ ಆಫೀಸರ್ಸ್ ಎಂದು ಇನ್‌ವೆಸ್ಟಿಗೇಷನ್‌ಗೆ ಕಳುಹಿಸಿ ಕೊಟ್ಟಿದ್ದಾರೆ? ಇದು ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆಯಲ್ಲಾ? ಹೈಕೋರ್ಟ್ ಎಲ್ಲವನ್ನು ನೋಡುತ್ತದೆ, ಇದರ ಬಗ್ಗೆ ಇನವೆಸ್ಟಿಗೇಷನ್ ಅಗತ್ಯವಿಲ್ಲ, ಇದರ ಬಗ್ಗೆ ಸದನದಲ್ಲಿ ಚರ್ಚೆಯ ಅಗತ್ಯವಿಲ್ಲ. ಇವರು ಯಾವುದನ್ನು ಅಗತ್ಯವಿಲ್ಲವೆಂದು ಹೇಳುತ್ತಿರುವುದು ಇವರ ಬಾಯಿಯಿಂದ ಆ ಮಾತು ಏತಕ್ಕಾಗಿ ಬರುತ್ತಿದೆ? ಆದಕಾರಣ ಇದು ಸಬ್‌ಜ್ಯುಡೀಸ್

ಆಗುವುದಿಲ್ಲ, ಈ ರಾಜ್ಯದಲ್ಲಿ ಈಗಾಗಲೇ ನಮ್ಮ ಕಂದಾಯ ಮಂತ್ರಿಗಳು ಹೇಳಿದ ರೀತಿಯಲ್ಲಿ ನಮ್ಮ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಲುಕ್ಸಾನ್ ಈಗಾಗಲೇ ಆಗಿದೆ. ಇಂತಹ ಸಂದರ್ಭಗಳಲ್ಲಿ ಈ ಸರ್ಕಾರದ ಎಲ್ಲಾ ವಿಚಾರಗಳು ಹೊರಗೆ ಬರಬೇಕಾದರೆ ಇದು ಅಂತರ್‌ಜಾಲ ವ್ಯಾಪ್ತಿ ಆದ ಕಾರಣ ಈ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲು ಸಿಬಿಐಗೆ ಒಪ್ಪಿಸಬೇಕೆಂಬ ಬಗ್ಗೆ ಬೇಡಿಕೆಯನ್ನು ಮಂಡನೆ ಮಾಡುವುದರಲ್ಲಿ ಸಬ್‌ಜುಡೀಸ್ ಎಂದು ಹೇಳಿದರೆ ಹೇಗೆ? ಇಲ್ಲಿ ಯಾವುದು ಚರ್ಚೆಗೆ ಬರುತ್ತದೆಂದು ಗೊತ್ತಾದರೆ ಹೈಕೋರ್ಟಿನಲ್ಲಿ ಯಾರಿಂದಲಾದರೂ ಸರ್ಕಾರದ ಪತಿಯಿಂದ ಒಂದು ರಿಟ್ ಪಿಟಿಷನ್ ಫೈಲ್ ಮಾಡಿಸುವುದು ಮತ್ತು ಇಲ್ಲಿ ನಮ್ಮ ಬಾಯಿಯನ್ನು ಮುಚ್ಚಿಸುವುದು. ಯಾವುದಾದರೂ ಸದನಕ್ಕೆ ಬರುವಂತಹ ವಿಚಾರಗಳಿದ್ದರೆ ಅವು ಪತ್ರಿಕೆಗಳಲ್ಲಿ ಬರುತ್ತವೆ. ಇಂತಹ ಪ್ರಮುಖವಾದ ವಿಚಾರಗಳು ಚರ್ಚೆಗೆ ಬರಬಹುದು. ಅದು ಬಂದ ತಕ್ಷಣ ಸರ್ಕಾರದವರು ಯಾರಾದರೊಬ್ಬರ ಹೆಸರಿನಲ್ಲಿ ರಿಟ್ ಪಿಟಿಶನ್ ಅನ್ನು ಫೈಲ್ ಮಾಡಿ ಸದನದಲ್ಲಿ ಶಾಸಕರ ಬಾಯಿಯನ್ನು ಬಂದ್ ಮಾಡಬಹುದೇ? ಈ ರೀತಿಯ ವ್ಯವಸ್ಥೆಗಳು ಸರಿಯಲ್ಲ. ಇದು ಸದನದಲ್ಲಿ ಸಬ್‌ಜ್ಯುಡೀಸ್ ಆಗುವುದಿಲ್ಲ, ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ತಾವು ಹೇಳುತ್ತಿರುವುದೆಲ್ಲಾ ಹೈಪಾಥೆಟಿಕಲ್.

ಶ್ರೀ ಬಿ.ಎನ್.ಬಚ್ಚೇಗೌಡ: ಸನ್ಮಾನ್ಯ ಅಧ್ಯಕ್ಷರೆ, What are the issues raised in the writ petition? That has to be placed before the House. What are the issues before the Court? What is the writ petition pending in the Court? That has to be placed before the House.

+ ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಸ್ಟ್ಯಾಂಪ್ ಹಗರಣ ಇಡೀ ದೇಶದ ಬಹಳಷ್ಟು ಜನರ ಗಮನವನ್ನು ಸೆಳೆದಿರುವಂತಹ ಒಂದು ಹಗರಣವಾಗಿದೆ. ಇಲ್ಲಿ ಯಾರು ಅಪರಾಧಿಗಳು ಎಂದು ಹೇಳುವಂತಹದ್ದು ನಿಜವಾಗಲೂ ಬಹಿರಂಗವಾದರೆ ಈ ಆರ್ಥಿಕ ಅಪರಾಧಿಗಳನ್ನು ನಾವು ಮಟ್ಟದೆ ಹೋದರೆ, ಇದನ್ನು ನಾವು ಮಟ್ಟ ಹಾಕದೆ ಹೋದರೆ, ಯಾವ ಸರ್ಕಾರವೂ ಕೂಡ ಉಳಿಯಲಿಕ್ಕೆ ಸಾಧ್ಯವಿಲ್ಲ, ಯಾವ ಸರ್ಕಾರವೂ ಕೂಡ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಯಾವುದೇ ರಾಜಕಾರಣವನ್ನು ಕಾಣಲಿಕ್ಕೆ ಇಲ್ಲ, ಆದರಿಂದಾಗಿ ಈ ಬಗ್ಗೆ ಪ್ರಾಮಾಣಿಕವಾಗಿ ತನಿಖೆ ನಡೆಯಬೇಕು ಎನ್ನುವಂತಹದ್ದು ನಮ್ಮ ಇರಾದೆಯಾಗಿದೆ. ಇದನ್ನು ಸಿಬಿಐಗೆ ಒಪ್ಪಿಸಬೇಕೆಂದು ಹೇಳಿ, ಇದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಯಬೇಕೆಂದು ನಾವು ಹೇಳುತ್ತಿರುವುದು. ಇದು ನಮ್ಮ ರಾಜ್ಯಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ, ಈಗಾಗಲೇ ಪೊಲೀಸ್ ಮುಖ್ಯಾಧಿಕಾರಿಗಳಾದ ಶ್ರೀ ಸಾಂಗ್ಲಿಯಾನರವರು ಕೊಟ್ಟಂತಹ ವರದಿ ಮತ್ತು ನಿಮ್ಮ ಹೇಳಿಕೆಗಳು ಪತ್ರಿಕೆಯಲ್ಲಿ ಬಂದಿವೆ. ದಿನಾಂಕ 19-11-2001ರಂದು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸಿಬಿಐಗೆ ಒಪ್ಪಿಸುವಂತಹ ಇರಾದೆ ಇದೆ ಎಂದು ಅವರು

ಒಪ್ಪಿಕೊಂಡಿದ್ದಾರೆ. 27-11-2001ರಲ್ಲಿ ಮಾನ್ಯ ಗೃಹ ಸಚಿವರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಶ್ರೀ ವಿ.ವಿ.ಭಾಸ್ಕರ್‌ರವರಿಗೆ ಸೂಚಿಸಿದ್ದೇನೆ, ಅವರಿಂದ ವರದಿ ಬಂದ ತಕ್ಷಣ ಇದನ್ನು ಸಿಬಿಐಗೆ ನಾವು ವಹಿಸಬೇಕಾಗುತ್ತದೆಂಬ ಮಾತನ್ನು ಈಗಾಗಲೇ ಹೇಳಿದ್ದಾರೆ. 25-11-2001ರಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಾದಂಥ ಶ್ರೀ ಸಾಂಗ್ಲಿಯಾನ್‌ರವರಿಗೆ ಬಂದಿರುವ ಮಾಹಿತಿ ಪ್ರಕಾರ ಬಹುಕೋಟಿ ನಕಲಿ ಛಾಪಾ ಕಾಗದದ ಹಗರಣದಲ್ಲಿ ಹಲವಾರು ಪೊಲೀಸ್ ಅಧಿಕಾರಿಗಳು ಶಾಮೀಲಾಗಿದ್ದಾರೆ......

ಅಧ್ಯಕ್ಷರು: ಮಾನ್ಯ ಅರಗ ಜ್ಞಾನೇಂದ್ರರವರೆ, ತಾವು ಡಿಟೇಲಾಗಿ ಹೇಳುವುದು ಬೇಡ. I have not yet given my consent.

ಶ್ರೀ ಅರಗಜ್ಞಾನೇಂದ್ರ: ನಾನು ಒಂದೆರಡು ಮಾತುಗಳನ್ನು ಹೇಳದಿದ್ದರೆ ಹೇಗೆ? ಅವರು ಹೇಳಿದ ಮಾತನ್ನು ನಾನು ಹೇಳುತ್ತಿದ್ದೇನೆಯೇ ಹೊರತು, ನನ್ನದೇ ಆದ ಮಾತನ್ನು ನಾನು ಏನೂ ಇಲ್ಲಿ ಹೇಳಲಿಲ್ಲ.

Mr.SPEAKER: You speak only whether it amounts to subjudice or not.

ಶ್ರೀ ಅರಗ ಜ್ಞಾನೇಂದ್ರ: ಇಲ್ಲಿ ನಾನು ತಮ್ಮನ್ನು ಕನ್‌ವಿನ್ಸ್ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇನೆ. ಇನ್ನು ನಾನು ಡಿಟೇಲ್ ಆಗಿ ಚರ್ಚೆಗೆ ಹೋಗಲಿಲ್ಲ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಇದೆ. ಇದು ರಾಜ್ಯದ ಹಾಗೂ ರಾಷ್ಟ್ರದ ಗಮನವನ್ನು ಸೆಳೆದಿರುವಂತಹ ಒಂದು ವಿಚಾರವಾಗಿರುವುದರಿಂದ ಹೇಳಬೇಕಾಗಿದೆ. ನಮ್ಮ ಕರ್ನಾಟಕ ರಾಜ್ಯದ ಅಸೆಂಬ್ಲಿಗೆ ಒಂದು ದೊಡ್ಡದಾದ ಹೆಸರು ಇದೆ. ಆ ಹೆಸರನ್ನು ನಾವು ಉಳಿಸಿಕೊಂಡು ಹೋಗಬೇಕಾಗುತ್ತದೆ, ಈ ಬಗ್ಗೆ ಒಳ್ಳೆಯ ನಿರ್ಣಯಗಳು ಬರಬೇಕಾಗುತ್ತದೆ. ಒಳ್ಳೆಯ ಡಿಬೇಟ್ ಆಗಬೇಕಾಗುತ್ತದೆ, ಈ ವಿಷಯದ ಬಗ್ಗೆ ಡಿಬೇಟ್ ಆಗದೆ ಇನ್ಯಾವ ವಿಚಾರದ ಬಗ್ಗೆ ನಾವು ಡಿಬೇಟ್ ಮಾಡಬೇಕಾಗುತ್ತದೆ ತಾವು ಹೇಳಿ? ನಾವು ಇಲ್ಲಿ ಶಾಸಕರಾಗಿ ಏತಕ್ಕಾಗಿ ಬಂದು ಕುಳಿತುಕೊಳ್ಳಬೇಕು ಹೇಳಿ. ಇದು ಬಹುಕೋಟಿ ರೂಪಾಯಿಗಳ ಹಗರಣವಾಗಿದೆ. ನೋಟು ಪ್ರಿಂಟ್ ಮಾಡುವುದು ಒಂದೇ, ಸ್ಟ್ಯಾಂಪ್ ಪೇಪರನ್ನು ಪ್ರಿಂಟ್ ಮಾಡುವುದು ಒಂದೇ ಇವರೆಡೂ ಕೂಡ ಒಂದೇ ಆಗಿದೆ. ಇಂತಹ ಒಂದು ಹಗರಣವನ್ನು ಬಯಲಿಗೆಳೆದಿರುವಂತಹ ಪೊಲೀಸ್ ಅಧಿಕಾರಿಗಳಿಗೆ ನಾವು ಸಪೋರ್ಟ್ ಮಾಡಬೇಕಾಗುತ್ತದೆ. ನಾವು ಅವರ ಕೈಯನ್ನು ಬಲಪಡಿಸಬೇಕಾಗುತ್ತದೆ, ಈ ಹಗರಣವು ರಾಜ್ಯದ ಹೊರಗಡೆಯೂ ವ್ಯಾಪಕವಾಗಿ ಹರಡಿದ್ದರಿಂದಾಗಿ ಇದನ್ನು ಹೊರಗೆಳೆಯುವಂತಹ ಕೆಲಸವನ್ನೂ ಕೂಡ ನಾವು ಮಾಡಬೇಕಾಗುತ್ತದೆ. ಈಗೇನು ಮಾನ್ಯ ಸದಸ್ಯರಾದ ಶ್ರೀ ಡಿ.ವಿ.ಸದಾನಂದಗೌಡರು

ಸಬ್‌ಜುಡೀಸ್ ಬಗ್ಗೆ ಹೇಳಿದ್ದಾರಲ್ಲಾ ಅದು ಸರಿ ಇದೆ. ನಾನು ಅದನ್ನೇ ಹೇಳುವುದಕ್ಕೆ ಹೊರಟ್ಟಿದ್ದೇನೆ, ಇದರಲ್ಲಿ ಯಾರಾದರೂ ತಪ್ಪಿಸಿಕೊಳ್ಳಬೇಕೆಂದರೆ, ಯಾರಿಂದಲಾದರೂ ರಿಟ್ ಅನ್ನು ಹಾಕಿಸಿದರೆ ಇವರು ಇಲ್ಲಿಗೆ ಬಂದು ಸಬ್‌ಜುಡೀಸ್ ಎಂದು ಹೇಳಿ ನಮ್ಮೆಲ್ಲರ ಬಾಯಿಯನ್ನು ಮುಚ್ಚಿಸುವುದಾಗುತ್ತದೆ. ಇವರು ಆರಂಭ ಮಾಡುತ್ತಿರುವಂತಹ ವಿಶೇಷವಾದ ಕೋರ್ಟನ್ನು ಯಾವಾಗ ಪ್ರಾರಂಭ ಮಾಡುವುದು ಗೊತ್ತೆ ಸ್ವಾಮಿ? ಈ ಬಗ್ಗೆ ವಿಚಾರಣೆ ಆಗಬೇಕಲ್ಲವೇ? ಇಲ್ಲಿ ವಿಚಾರಣೆಗೆ ಅವಕಾಶವಿಲ್ಲವೆಂದು ಹೇಳಿ, ಕೋರ್ಟನ್ನು ಮಾಡಿದ್ದೇವೆ ಎಂದು ಹೇಳಿದರೆ ಕೋರ್ಟಿನಲ್ಲಿ ನಾವು ಯಾರನ್ನು ವಿಚಾರಣೆ ಮಾಡಬೇಕು? ಇದಕ್ಕೆ ಸಂಬಂಧಪಟ್ಟಂತಹ ಏಜೆನ್ಸಿ ಸರಿಯಾದ ರೀತಿಯಲ್ಲಿ ಎನ್‌ಕ್ವಯರಿಯನ್ನು ಮಾಡಬೇಕಾಗುತ್ತದೆ. ಈ ಬಗ್ಗೆ ಪೊಲೀಸ್ ಅಧಿಕಾರಿಗಳು ಕೂಡ ಸಿಬಿಐಗೆ ಒಪ್ಪಿಸಬೇಕೆಂದು ಸಹ ಹೇಳಿದ್ದಾರೆ. ಈ ಹಂತದಲ್ಲಿ ಈ ಬಗ್ಗೆ ಸರಿಯಾದ ರೀತಿಯಲ್ಲಿ ಚರ್ಚೆಯಾಗಬೇಕಾಗುತ್ತದೆ. ಇದು ಇಡೀ ರಾಜ್ಯದ, ಮಾಧ್ಯಮಗಳ, ಸಾಮಾನ್ಯ ಜನರ ಗಮನವನ್ನು ಸೆಳೆದಿರುವಂತಹ ಒಂದು ಹಗರಣವಾಗಿದೆ. ಯಾರು ಅಧಿಕಾರದಲ್ಲಿದ್ದಾರೆ ಅಂತಹ ಜನರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎನ್ನುವಂತಹ ಶಂಕೆಯೂ ಕೂಡ ಮೂಡಿದೆ. ಈ ಹಗರಣದಲ್ಲಿ ಅವರ ಬಂಧುಗಳೂ ಕೂಡ ಶಾಮೀಲಾಗಿದ್ದಾರೆ ಎಂಬ ಶಂಕೆಯೂ ಕೂಡ ಸಾಮಾನ್ಯ ಜನರ ಬಾಯಿಯಲ್ಲೂ ಕೂಡ ನಿರ್ಮಾಣವಾಗಿದೆ. ಈ ಬಗ್ಗೆ ಚರ್ಚೆಯ ಮೂಲಕ ಒಂದು ವಸ್ತುಸ್ಥಿತಿಯೂ ಕೂಡ ಹೊರಗೆ ಬರಬೇಕಾಗಿದೆ, ಇದೊಂದು ಅಂತರರಾಷ್ಟ್ರೀಯ ಮಟ್ಟದ ಜಾಲವಾಗಿರುವುದರಿಂದ, ಈ ದೇಶದಲ್ಲಿ ಏನು ನಡೆಯುತ್ತಿದೆ, ಅಂತರರಾಷ್ಟ್ರೀಯ ಮಟ್ಟದ ಭಯೋತ್ಪಾದನೆಗೆ ಇದರಿಂದ ಹಣವು ಸರಬರಾಜಾಗುತ್ತಿದೆ ಎಂಬುದೂ ಕೂಡ ಇವತ್ತು ಇದೆ. ಈ ಹಿನ್ನೆಲೆಯಲ್ಲಿ ನಾವು ಅಸೆಂಬ್ಲಿಯೊಳಗಡೆ ಈ ಬಗ್ಗೆ ವ್ಯಾಪಕವಾದಂತಹ ಚರ್ಚೆಯಾಗಬೇಕಾಗಿದೆ. ಇದಕ್ಕಾಗಿ ನಾವು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ, ದಯಮಾಡಿ ತಾವು ನಮಗೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

\+ ಶ್ರೀ ವೈ.ಕೆ.ರಾಮಯ್ಯ(ಹುಲಿಯೂರುದುರ್ಗ): ಮಾನ್ಯ ಅಧ್ಯಕ್ಷರೆ, ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ನಿಲುವಳಿ ಸೂಚನೆಯನ್ನು ತರಬೇಕಾದರೆ 60ನೇ ನಿಯಮದ ಪ್ರಕಾರ ಕೆಲವು ನಿಬಂಧನೆಗೆ ಒಳಪಟ್ಟು ತರಬೇಕಾಗುತ್ತದೆ. ಈ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡಿ ಚರ್ಚೆ ಮಾಡಬೇಕು ಅಥವಾ ಬಿಡಬೇಕು ಎಂಬ ವಿಚಾರ ತಮಗೆ ಬಿಟ್ಟಿದೆ. ಆದರೆ ಇದು ಯಾವ ಅವಧಿಗೆ ಸಂಬಂಧಪಟ್ಟಿದೆ ಎಂದು ಸಂಬಂಧಪಟ್ಟವರು ಸದನಕ್ಕೆ ತಿಳಿಸಿದರೆ ನಾವು ಆ ಬಗ್ಗೆ ಮುಂದಕ್ಕೆ ಅದರ ಬಗ್ಗೆ ಮಾತನಾಡುತ್ತೇವೆ. ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನು ಕೇಳುತ್ತಿರುವುದು ಸರ್ಕಾರವಾದರೂ ಈ ಬಗ್ಗೆ ಉತ್ತರ ಕೊಡಬಹುದು, ನಿಲುವಳಿ ಸೂಚನೆಯನ್ನು ತಂದಿರುವವರಾದರೂ ಕೊಡಬಹುದು. I am not objecting your proposal. I want to know to which period this pertains? ಇದು ಯಾವ ಅವಧಿಗೆ ಸೀಮಿತವಾಗಿದೆ? ಇಲ್ಲಿ ಕೆಲವು ಕಂಡೀಷನ್ಸ್ ಇದೆ, ಯಾವ ಅವಧಿಗೆ ಇದು ಸಂಬಂಧಪಟ್ಟಿರುವುದು ಎಂಬ

ಒಂದು ಮಾಹಿತಿಯಷ್ಟೇ ನನಗೆ ಬೇಕಾಗಿರುವುದು.

ಶ್ರೀ ಸಿ.ಭೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ ಇತ್ತೀಚೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಕಡಿತಗೊಳಿಸಿರುವ ಬಗ್ಗೆ ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.

ಅಧ್ಯಕ್ಷರು: ಆ ನಿಲುವಳಿ ಸೂಚನೆ ಬಗ್ಗೆ ಹೇಳುವುದಾದರೆ, ಮಾನ್ಯ ವಿರೋಧ ಪಕ್ಷದ ನಾಯಕರದು 8-45 ಗಂಟೆಗೆ ಬಂದಿದೆ. ನಿಮ್ಮದು 9-30 ಗಂಟೆಗೆ ಬಂದಿದೆ. ನಾವು ದಿವಸಕ್ಕೆ ಒಂದೇ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದು. ಅದನ್ನು ನಾಳೆ ದಿವಸ ನೋಡೋಣ.

ಶ್ರೀ ಸಿ.ಭೈರೇಗೌಡ: ತಾವು ನಾಳೆ ಚರ್ಚೆಗೆ ಅವಕಾಶವನ್ನು ಕೊಡುತ್ತೀರೆಂದರೆ ಸಂತೋಷ.

ಅಧ್ಯಕ್ಷರು: ನಿಯಮ 69 ಅಥವಾ ಯಾವುದಾದರೂ ರೀತಿಯಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡೋಣ.

ಶ್ರೀ ಸಿ.ಭೈರೇಗೌಡ: ಇಲ್ಲೇ ಚರ್ಚೆ ಆಗಬೇಕೆಂದು ಏನೂ ಇಲ್ಲ, ನಮಗೆ ಇರುವಂತಹ ಸಮಸ್ಯೆ ಬಗೆಹರಿಯುವುದಾದರೆ ಇಲ್ಲಿ ಚರ್ಚೆಯೇ ಅನಾವಶ್ಯಕ. ನಾನಂತೂ ಚರ್ಚೆಗೋಸ್ಕರ ಚರ್ಚೆ ಮಾಡುವುದಕ್ಕೆ ತಯಾರಿಲ್ಲ. ಇಲ್ಲಿ ಬಹಳ ಭೀಕರವಾದಂತಹ ಪರಿಸ್ಥಿತಿ ಇದೆ. ಸದನ ಮುಗಿಯುವುದು ಸಾಯಂಕಾಲ 6 ಗಂಟೆಗೆ ಎಂದು ಹೇಳಿ, ವಾರದಲ್ಲಿ 6 ಗಂಟೆಯೆಂದರೆ ಹೇಗೆ?

Mr.Speaker: We will take it up tomorrow.

ಶ್ರೀ ಸಿ.ಭೈರೇಗೌಡ: ಆಗಬಹುದು. ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ನಮ್ಮ ಪಕ್ಷದಿಂದ ಕಳುಹಿಸಿದ್ದೇವೆ. ಇವತ್ತು ಕಳಿಹಿಸಿರುವಂತಹ ನಿಲುವಳಿ ಸೂಚನೆಯನ್ನು ನಾಳೆ ದಿವಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ನಾಳೆ ದಿವಸ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವ ಬಗ್ಗೆ ಇವತ್ತು ಸಾಯಂಕಾಲ ತಾವು ಬೇರೆಯದನ್ನು ಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅದಕ್ಕಾಗಿ ನಾನು ಇಲ್ಲಿ ಏನು ಹೇಳುತ್ತಿದ್ದೇನೆಂದರೆ, ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು, ಎಂಬುದು ನಮ್ಮ ಮನವಿಯಾಗಿದೆ. ಯಾವ ರೂಪದಲ್ಲಿ ಕೊಡುತ್ತೀರಾ ಎಂಬ ಬಗ್ಗೆ ತಾವು ಅನಂತರ ತೀರ್ಮಾನ ಮಾಡಿ. ಈಗಲೇ ತೀರ್ಮಾನ ಮಾಡಿ ಎಂದು ಹೇಳುತ್ತಿಲ್ಲ. ಇವತ್ತು ನಮ್ಮ ನಿಲುವಳಿ

ಸೂಚನೆಯನ್ನು ಎತ್ತಿ ಹಿಡಿದು ಆ ಬಗ್ಗೆ ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೀರೆಂದರೆ ಅದು ಅಲ್ಲಿಗೆ ಮುಗಿಯುತ್ತದೆ.

ಅಧ್ಯಕ್ಷರು: ಆಯಿತು.

ಶ್ರೀ ಜಗದೀಶ್‌ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಏನು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಆ ಬಗ್ಗೆಯೂ ಕೂಡ ಸಾಕಷ್ಟು ಚರ್ಚೆಯಾಗಬೇಕಾಗಿದೆ. ಅದರ ಬಗ್ಗೆ ತಾವು ಅವಕಾಶವನ್ನು ಯಾವುದೇ ರೀತಿಯಲ್ಲಿ ಮಾಡಿಕೊಡಬಹುದು. ಇಲ್ಲಿ ಮುಖ್ಯವಾಗಿ ದೊಡ್ಡದಾದ ಸ್ಕ್ಯಾಮ್ ಇದೆ, ಇದರಿಂದಾಗಿ 10 ಸಾವಿರ ಕೋಟಿ ರೂಪಾಯಿಗಳು ಆದಾಯ ಕಡಿಮೆಯಾಗುತ್ತಿದೆ, ಇವತ್ತು ನಾವು ರೈತರಿಗೆ 300 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡಬೇಕಾದರೆ ಕೊಡುವುದಕ್ಕೆ ಆಗುವುದಿಲ್ಲವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಇವತ್ತು ಖೋಟಾ ಸ್ಟ್ಯಾಂಪ್ ಪೇಪರ್ ವಿಷಯದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಇಲ್ಲಿ ಹೋಗುತ್ತಿದೆ. ಅದನ್ನು ನಿಯಂತ್ರಣಕ್ಕೆ ತಂದರೆ ಸರ್ಕಾರ ಏನಾದರೂ ರೈತರಿಗೆ ಅನುಕೂಲ ಮಾಡಲಿಕ್ಕೆ ಆಗುತ್ತದೆ. ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಕಲಿ ಛಾಪಾ ಕಾಗದದ ಮಾರಾಟ ಇವತ್ತಿನಿಂದ ನಡೆಯುತ್ತಿದೆ, ಹಿಂದೆ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಇದು ಹಿಂದೆ ಸಹ ಇತ್ತು. ಆದರೆ ಮಾನ್ಯ ರಾಮಯ್ಯನವರು ಅದು ಯಾವಾಗ ನಡೆಯಿತು, ಇತ್ತೀಚೆಗೆ ನಡೆದಿದೆಯೇ ಎನ್ನುವ ವಿಷಯ ಪ್ರಸ್ತಾಪ ಮಾಡಿದರು. ಈ ವರ್ಷ ಆಗಸ್ಟ್ 10ನೇ ತಾರೀಖು ಆರ್.ಟಿ.ನಗರದಲ್ಲಿ ಧಾಳಿ ನಡೆಸಿದಾಗ 12 ಕೋಟಿ ರೂಪಾಯಿಗಳ ನಗಲಿ ಛಾಪಾ ಕಾಗದ ಸಿಕ್ಕಿದೆ.

ಅಧ್ಯಕ್ಷರು: ಇದು ಸಬ್‌ಜ್ಯುಡೀಸ್ ಆಗುತ್ತದೋ ಅಥವಾ ಇಲ್ಲವೋ ಅವರೇನು ರೈಸ್ ಮಾಡಿದ್ದಾರೆ. ಅದರ ಬಗ್ಗೆ ಮಾತನಾಡಿ.

ಶ್ರೀ ಬಿ.ಸೋಮಶೇಖರ್: ಒಬ್ಬ ಸ್ಟಾಂಪ್‌ವೆಂಡರ್ ಹತ್ತಿರ ಅಷ್ಟು ಸಿಕ್ಕಿರತಕ್ಕದ್ದು. ಎಲ್ಲಾ ಕಡೆ ಅದು ಎಷ್ಟಾಗಿರಬೇಕು ಅದನ್ನು ಗಮನದಲ್ಲಿಟ್ಟುಕೊಂಡು.........

ಶ್ರೀ ವೈ.ಕೆ.ರಾಮಯ್ಯ: ಸಬ್‌ಜುಡೀಸ್ ಆಗುತ್ತದೆಯೋ ಇಲ್ಲವೋ ಎನ್ನುವುದರ ಜೊತೆಗೆ ನಿಲುವಳಿ ಸೂಚನೆ ತರಬೇಕಾದರೆ ಕಂಡೀಷನ್ಸ್‌ಗಳು ಏನಿವೆ ಎನ್ನುವುದನ್ನು ನೋಡಬೇಕಾಗುತ್ತದೆ.

ಶ್ರೀ ಬಿ.ಸೋಮಶೇಖರ್: ಅದನ್ನು ಹೇಳುತ್ತೇನೆ. ಅದಕ್ಕಾಗಿ ನಾನು ಹೇಳುವುದು ಸಾರ್ವಜನಿಕರ ನೂರಾರು ಕೋಟಿ ರೂಪಾಯಿ ಹಣ ನಷ್ಟವಾಗಿದೆ.

ಶ್ರೀ ವೈ.ಕೆ.ರಾಮಯ್ಯ: ನಿಲುವಳಿ ಸೂಚನೆ ತರಬೇಕಾದರೆ ನಿಬಂಧನೆಗಳಿವೆ. ಅದೆಲ್ಲವನ್ನೂ ಫುಲ್‌ಫಿಲ್ ಮಾಡಬೇಕಾಗುತ್ತದೆ. ಅದಕ್ಕಾಗಿ ನಾನು ಪೀರಿಯಡ್ ಯಾವುದು ಎಂದು ಕೇಳಿದ್ದು?

ಶ್ರೀ ಬಿ.ಸೋಮಶೇಖರ್: ಸಾರ್ವಜನಿಕವಾಗಿ ಇದು ಪ್ರತಿಯೊಂದು ಮನೆಗೂ ಸಂಬಂಧಪಟ್ಟ ವಿಚಾರ. ನೂರಾರು ಕೋಟಿ ಅಲ್ಲ, ಸಾವಿರಾರು ಕೋಟಿ ರೂಪಾಯಿ ಅವ್ಯವಹಾರವಾಗಿದೆ ಎಂದು ಹೇಳುತ್ತೇವೆ. ಯಾವುದೇ ಕೋರ್ಟ್‌ಗಳು ತೀರ್ಪು ನೀಡಿದ್ದರೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಕೋರ್ಟ್‌ಗಳ ತೀರ್ಪು ಇನ್ನೂ ಬಂದಿಲ್ಲ. ಯಾವುದೇ ಸಾರ್ವಜನಿಕ ಹಿತಾಸಕ್ತಿಯ ವಿಚಾರವಾಗಿ ಸರ್ಕಾರ ಯಾವ ರೀತಿ ಅನ್ಯಾಯ ಮಾಡಿದೆ ಎನ್ನುವುದರ ಬಗ್ಗೆ ನಾನು ನೇರವಾಗಿ ಆಪಾದನೆ ಮಾಡಿದ್ದೇನೆ. ಈ ಒಂದು ಹಗರಣವಾಗಬೇಕಾದರೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಸರ್ಕಾರ ಬೆಂಬಲ ಕೊಟ್ಟಿದೆ ಎಂದು ಅಂಕಿಅಂಶಗಳ ಸಮೇತ ಹೇಳುತ್ತೇನೆ. ಆದ್ದರಿಂದ ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡಲೇಬೇಕು. ಇದು ಮಹತ್ತರವಾದ ವಿಚಾರ. ಅದರ ಬಗ್ಗೆ ವಿವರವಾಗಿ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದು ಏಕೆ ಸಬ್ ಜ್ಯುಡೀಸ್ ಆಗುವುದಿಲ್ಲವೆಂದರೆ, ಪೊಲೀಸ್ ಕಮಿಷನರ್ ಎಚ್.ಟಿ. ಸಾಂಗ್ಲಿಯಾನರವರು ಒಂದು ಕಡೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಏನು ಹೇಳಿದ್ದಾರೆಂದರೆ, ಈ ವಿಚಾರವನ್ನು ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಸಿಬಿಐಗೆ ಕೊಡಬೇಕೆಂದು ಹೇಳಿದ್ದಾರೆ. ಈಗಾಗಲೇ ಅವರು ಮಾನ್ಯ ಮುಖ್ಯ ಮಂತ್ರಿಯವರಿಗೆ ಮತ್ತು ಗೃಹ ಇಲಾಖೆಯ ಕಾರ್ಯದರ್ಶಿಯವರಿಗೆ ಸಹ ಪತ್ರ ಬರೆದಿದ್ದಾರೆ. ಇದನ್ನು ಸಿಬಿಐ ಇನ್‌ವೇಸ್ಟಿಗೇಷನ್‌ಗೆ ಕೊಡಬೇಕೆಂದು ಪೊಲೀಸ್ ಕಮಿಷನರ್ ಸಾಂಗ್ಲಿಯಾನರವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅದನ್ನು ನಾವು ನೋಡುತ್ತಿದ್ದೇವೆ. ನಿನ್ನೆ ಪತ್ರಿಕೆಯಲ್ಲಿ ಒಂದು ಹೇಳಿಕೆ ಬಂದಿದೆ. ಸಿಬಿಐ ತನಿಖೆ ಕೇಳಬೇಡಿಯೆಂದು ಸಾಂಗ್ಲಿಯಾನರವರ ಮೇಲೆ ರಾಜ್ಯ ಸರ್ಕಾರದ ಕಡೆಯಿಂದ ಒತ್ತಡ ಬರುತ್ತಿದೆ ಎನ್ನುವ ಬಗ್ಗೆ ಹೇಳಬೇಕು. ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಇರುವ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳಾದ ಚಂದ್ರೇಗೌಡರು ಹೇಳಿದ್ದಾರೆ. ಇವತ್ತು ಒಂದು ಹೇಳಿಕೆಯನ್ನು ರಾಜ್ಯ ಸರ್ಕಾರದವರು ಕೊಡಬೇಕಾಗುತ್ತದೆ. ಹೈಕೋರ್ಟ್‌ಗೆ ಹೋಗಿ ಸಾಂಗ್ಲಿಯಾನರವರು ರಿಟ್ ಪಿಟಿಷನ್ ಬಗ್ಗೆ ಹೇಳಬೇಕಾಗುತ್ತದೆ. ಹೈಕೋರ್ಟ್‌ನಲ್ಲಿರುವ ಯಾವುದೇ ವಿಷಯವನ್ನು ಸಿಬಿಐ ಇನ್‌ವೆಸ್ಟಿಗೇಷನ್‌ಗೆ ಒತ್ತಾಯ ಮಾಡಬಾರದು ಎನ್ನುವ ಕೆಲಸ ಮಾಡಿದರೆ ನಾವು ಚರ್ಚೆ

ಮಾಡಬೇಕಾಗುತ್ತದೆ. ಯಾವುದೇ ಒತ್ತಡ ತರುವಂತಹ ಕೆಲಸ ಮಾಡಿದರೆ ಅಂತಹದ್ದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಇಂತಹ ದೊಡ್ಡ ಪ್ರಕರಣಗಳನ್ನು ಮುಚ್ಚಿ ಹಾಕುವ ಸಂದರ್ಭಗಳು ಇದೆ. ಈ ರೀತಿ ಅಧಿಕಾರಿಗಳ ಮೇಲೆ ಪ್ರೆಷರ್ ಮಾಡುವುದು ಚಾಲೂ ಆಗಿದೆ. ಇವತ್ತಿನ ಪತ್ರಿಕಾ ಹೇಳಿಕೆಯಲ್ಲಿ ಸಹ ಬಂದಿದೆ. ಖೋಟಾ ಸ್ಟ್ಯಾಂಪ್ ಪೇಪರ್ ಮಾರಾಟ ಮುಂದುವರಿದಿದೆಯೆಂದು. 40-50 ಜನ ಹುಡುಗರು ಈ ಪ್ರಕರಣದಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಈವೊಂದು ಪ್ರಕರಣದಲ್ಲಿ ಮೂಲ ಮಾಹಿತಿಯನ್ನು ಕೊಟ್ಟಂತಹ ಜಯಂತ್ ತಿನೇಕರ್ ಏನಿದ್ದಾನೆ ಆ ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾನೆ. ಖೋಟಾ ಸ್ಟ್ಯಾಂಪ್ ಪೇಪರ್ ಮಾರಾಟ ಮಾಡುವುದು ಮತ್ತೆ ಮುಂದುವರಿದಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಏಕೆಂದರೆ ಕರೀಂಲಾಲ್ ಮುಖ್ಯ ಆರೋಪಿ ಏನು ಅರೆಸ್ಟ್ ಆಗಿದ್ದಾನೆ, ಅವರು ಅರೆಸ್ಟ್ ಆಗಲಿಕ್ಕೆ ಜಯಂತ್ ತಿನೇಕರ್ ಎಂಬ ಬೆಳಗಾಂನ ಖಾನಾಪುರದ ಒಬ್ಬ ವಿದ್ಯಾರ್ಥಿ ಅವನು ನೀಡಿದ ಮಾಹಿತಿ ಪ್ರಕಾರ ಪ್ರಮುಖ ಆರೋಪಿ ಅರೆಸ್ಟ್ ಆಗಿದ್ದಾನೆ ಎನ್ನುವ ಸ್ಟೇಟ್‌ಮೆಂಟ್ ಅವನ ಕಡೆಯಿಂದ ಆಗಿದೆ. ಹೀಗಾಗಿ ಅದರ ಬಗ್ಗೆ ನಾವು ಚರ್ಚೆ ಮಾಡಲೇಬೇಕಾಗುತ್ತದೆ. ಅದರ ಸಲುವಾಗಿ ಇದು ಸಬ್‌ಜ್ಯುಡೀಸ್ ಆಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಈ ವಿಷಯ ಸದನದಲ್ಲಿ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು: ಮಾನ್ಯ ಬಚ್ಚೇಗೌಡರೆ, ಆಗಲೇ ತಾವು ಪಾಯಿಂಟ್ ಆಫ್ ಆರ್ಡರ್ ಮೂಲಕ ಆಗಲೇ ರೈಸ್ ಮಾಡಿದ್ದೀರಿ.

ಶ್ರೀ ಬಿ.ಎನ್.ಬಚ್ಚೇಗೌಡ: ಒಂದು ಮಾತು ಹೇಳುತ್ತೇನೆ. ಈಗಾಗಲೇ ಈ ಸದನದಲ್ಲಿ ಅನೇಕ ಪ್ರಕರಣಗಳಲ್ಲಿ ಕೋರ್ಟ್‌ನಲ್ಲಿರತಕ್ಕ ಕಾವೇರಿ ನ್ಯಾಯ ಪ್ರಾಧಿಕಾರದ ವಿಷಯವಿರಬಹುದು, ಸುಪ್ರೀಂಕೋರ್ಟ್‌ನಲ್ಲಿರುವ ವಿಷಯಗಳು ಇರಬಹುದು, ಅದರ ವ್ಯಾಪ್ತಿಯನ್ನು ಬಿಟ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಆವೊತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಕಡೆಗೆ ಇದ್ದರು. ಅದೇ ರೀತಿ ಮಾನ್ಯ ಚಂದ್ರೇಗೌಡರು ಈ ಕಡೆಗೆ ಇದ್ದರು, ಅವರಿಗೆ ಜಾಗದ ಮರೆವು. ಈಗ ಆ ಕಡೆಗೆ ಹೋದರೆ ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳುತ್ತಾರೆ. ರಿಟ್ ಪಿಟಿಷನ್‌ನಲ್ಲಿ ಯಾವ ವಿಷಯವನ್ನು ರೈಸ್ ಮಾಡಿದ್ದಾರೆ. ಆ ವ್ಯಾಪ್ತಿಯಲ್ಲಿ ಬಾರದೆ ಇರತಕ್ಕ ವಿಷಯವನ್ನು ಚರ್ಚೆ ಮಾಡಬಹುದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರೆ ಉತ್ತರ ಹೇಳಿ. ಹೀಗೆ ಐದಾರು ಜನ ಎದ್ದು ನಿಂತು ಮಾತನಾಡಿದರೆ ಹೇಗೆ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಬಚ್ಚೇಗೌಡರು ಕುಳಿತುಕೊಂಡರೆ ನಾನು ಹೇಳಬಹುದು. ಅವರು ನಿಂತೇ ಇದ್ದರೆ ನಾನು ಏಳುವುದು ಹೇಗೆ ಅವರು ಮೊದಲೇ ಉದ್ದ.

ಶ್ರೀ ಕೆ.ನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಒಂದೇ ನಿಮಿಷ ಮಾತನಾಡುತ್ತೇನೆ. ಗುರುತರವಾದ ಆಪಾದನೆ ಒಬ್ಬ ಮಂತ್ರಿಗಳ ಮೇಲೆ ಬಂದಿದೆ. ಇಂತಹ ಗುರುತರವಾದ ಆಪಾದನೆ ಬಂದಿರುವಾಗ ಇಂತಹ ಒಂದು ವಿಷಯದ ಬಗ್ಗೆ ನಾವು ಯಾವಾಗ ಚರ್ಚೆ ಮಾಡಬೇಕು? ಏಕೆಂದರೆ ಅಸೆಂಬ್ಲಿ ಸೇರುವುದೇ ಎರಡು ಸಲ, ಅದರಲ್ಲಿ ನಾವು ಮಾಡುವುದು ಏನು?

ಅಧ್ಯಕ್ಷರು: ಸಬ್‌ಜ್ಯುಡೀಸ್ ಆಗುವುದಿಲ್ಲ, ಅದರ ಬಗ್ಗೆ ಏನಾದರೂ ಇದ್ದರೆ ಹೇಳಿ.

ಶ್ರೀ ಕೆ.ಎನ್ ಸುಬ್ಬಾರೆಡ್ಡಿ: ಸುಪ್ರೀಂ ಕೋರ್ಟ್‌ನಲ್ಲಿರತಕ್ಕ ವಿಷಯಗಳ ಬಗ್ಗೆ ಲೋಕಸಭೆಯಲ್ಲಿ ಚರ್ಚೆ ಮಾಡೋಣ. ಮಾನ್ಯ ಮಂತ್ರಿಗಳೊಬ್ಬರು ಇದರಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಅವರ ಬಗ್ಗೆ ಎನ್‌ಕ್ವಾಯರಿ ಮಾಡಿಯೆಂದು ಹೇಳುತ್ತಿದ್ದೇನೆ ಅಷ್ಟೆ. ಇದರಲ್ಲಿ ಸಬ್‌ಜ್ಯುಡೀಸ್ ಏನಿದೆ?

ಅಧ್ಯಕ್ಷರು: ಸಬ್‌ಜ್ಯುಡೀಸ್ ಆಗುತ್ತದೋ ಇಲ್ಲವೋ ಅದರ ಬಗ್ಗೆ ಮಾತನಾಡಿ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಅದರ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಮಹತ್ತರವಾದ ಎನ್‌ಕ್ವಾಯರಿಗೆ ಮನಸ್ಸು ಮಾಡಬೇಕು. ಎನ್‌ಕ್ವಾಯರಿಯನ್ನು ಸಿಬಿಐ ಕಡೆಯಿಂದ ಮಾಡಿಸಬೇಕು, ಅದನ್ನು ಮಾಡಿಸುವುದಕ್ಕೆ ಏನು ತೊಂದರೆಯಿದೆ? ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಮಂತ್ರಿಗಳಿಗೆ ಪೊಲೀಸ್ ಕಮಿಷನರ್ ಆ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನಾದರೂ ಕೊಡಿ, ನಿಮಗೇನು ತೊಂದರೆ?

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಸದಸ್ಯರು ವಿವರಕ್ಕೆ ಹೋಗುತ್ತಿದ್ದಾರೆ. ನಾವು ಇನ್ನೂ ಅಡ್ಮಿಷನ್ ಸ್ಟೇಜ್‌ನಲ್ಲಿದ್ದೇವೆ.

MR.SPEAKER: I have not yet given my consent.

SRI D.B.CHANDREGOWDA: We are discussing the writ jurisdiction. We are still discussing the jurisdiction, not beyond that. ನೀವು ಚರ್ಚೆಗೆ ಹೋಗುತ್ತಿದ್ದೀರಿ. ನಾವು ಸದನವನ್ನು ನಡೆಸುವಾಗ ಕೆಲವು ನಿಯಮಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ನಿಯಮಗಳನ್ನು ಮಾಡಲಿಕ್ಕೆ ಸಾಕಷ್ಟು ಚರ್ಚೆ ಮಾಡಿ ಪುಸ್ತಕ ರೂಪದಲ್ಲಿ

ಹೊರ ತಂದಿದ್ದಾರೆ. ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್‌ನ್ನು ಕೌಲ್ ಅಂಡ್ ಶೆಕ್ದಾರ್‌ರವರು ಪ್ರಸ್ತಾಪ ಮಾಡುತ್ತಾರೆ. ಸಾಮಾನ್ಯವಾಗಿ ಇದನ್ನು ಎಲ್ಲಾ ಪ್ರಸಂಗಗಳು ಬಂದಾಗ ನಾವು ಪ್ರಸ್ತಾಪ ಮಾಡುತ್ತೇವೆ. ಆದರೆ ಇವತ್ತಿನ ಸಮಸ್ಯೆ ಏನಿದೆ ಅಂದರೆ ಅದನ್ನು ನಾನು ಆಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ತೀರ್ಪು ಕೊಡುವವರು. ನಿಮ್ಮ ತೀರ್ಪಿನ ಬಗ್ಗೆ ನಾನು ಮಾತನಾಡುವುದಿಲ್ಲ. ಇವತ್ತು ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಸಂಬಂಧ ಎರಡು ಕೇಸುಗಳು, ಒಂದು ಉಚ್ಚ ನ್ಯಾಯಾಲಯದಲ್ಲಿ ಮತ್ತೊಂದು ಸೆಷನ್ಸ್ ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ. ರಿಟ್ ಪಿಟಿಷನ್ ನಂ.44342/2001. Public interest petition is pending on the same question. This is number one. Under Order 1 Rule 10(2) read with Section 141 of the code of Civil Procedure and read with Articles 226 and 227 of the Constitution of India ಒಂದು ರಿಟ್ ಪಿಟಿಷನ್ ಪೆಂಡಿಂಗ್ ಇದೆ. ಮತ್ತೊಂದು ಈಗಾಗಲೇ ಚಾರ್ಜ್‌ಶೀಟ್ ಹಾಕಿದ್ದಾರೆ ಸೆಷನ್ಸ್ ಕೋರ್ಟಿನಲ್ಲಿ. ಈ ಸಂಬಂಧವಾಗಿ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಅದರಲ್ಲಿ ಏನು ಹೇಳುತ್ತಾರೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ನನ್ನ ತೀರ್ಮಾನವಲ್ಲ. ಚಂದ್ರೇಗೌಡರು ಇಲ್ಲಿ ಇದ್ದಾಗ ಹಾಗೆ ಮಾತನಾಡಿದ್ದಾರೆ, ಅಲ್ಲಿಗೆ ಹೋದಾಗ ಹೀಗೆ ಮಾಡುತ್ತೀರಿ ಎಂದು ಹೇಳುವುದಲ್ಲ. ಇದು ಎಲ್ಲ ಕಾಲಕ್ಕೂ ನಮಗೆ ಭಗವದ್ಗೀತೆ ಇದ್ದ ಹಾಗೆ. ಆ ಭಗವದ್ಗೀತೆಯನ್ನು ಅಲ್ಲೂ ಹೇಳಿದ್ದೇನೆ, ಈಗಲೂ ಹೇಳಿದ್ದೇನೆ. ಹಿಂದೆ ಅಲ್ಲಿ ಕುಳಿತಿದ್ದಾಗ ಹೇಳಿದ್ದೇನೆ. ಸ್ವಾಮಿ, ಈ ಭಗವದ್ಗೀತೆಯೇ ನಮಗೆ ಆಧಾರ. ಇದರಲ್ಲಿ, Motion of Adjournment on a matter of urgent public importance, Page 511, 1st paragraph:

"A matter is not subjudice until the legal proceedings actually start."

The sentence is:".....until the legal proceedings acually start."

"....But the moment a complaint is filed or a petition is launched......."

"involving the jurisdiction of any of the Courts in India, the Court is seized of the matter"

This is the crux of the matter. And to that extent, the jurisdiction of this House to discuss the matter is barred. ಇದು ಕನ್‌ಕ್ಲೂಸಿವ್ ಆಗಿ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನಲ್ಲಿ ಹೇಳಿರತಕ್ಕಂತ ಮಾತು. ಆದ್ದರಿಂದ - Adjournmnet motion to the moving of which leave of the House has been granted, cannot be proceeded with. Even if it is granted, *it should not be* proceeded with if at any point of time appointed for taking up the motion,

the matter has become subjudice. The matter which is appealable cannot be discussed by this House. ಆದ್ದರಿಂದ ರಿಸ್ಟ್ರಿಕ್ಷನ್ಸ್ ಹಾಕುವಾಗ ಇದನ್ನೆಲ್ಲಾ ಹೇಳಿದ್ದಾರೆ. ಈಗ ಎರಡನೇ ಪ್ರಶ್ನೆ ಏನಿದೆ? ಸ್ಪೆಷಲ್ ಕೋರ್ಟ್ ಕಾನ್ಸ್ಟಿಟ್ಯೂಟ್ ಮಾಡಿದ್ದೇವೆ. ಇಲ್ಲೇ ಸರ್ಕಾರಕ್ಕೆ ಇರತಕ್ಕಂತ ಕಳಕಳಿಯ ಅಭಿವ್ಯಕ್ತಿ. ಇದು ರೆಗ್ಯುಲರ್ ಕೋರ್ಟಿನಲ್ಲಿ ನಿಧಾನವಾಗುತ್ತದೆ. ನಾವು ಏನು ಹೇಳಿದ್ದೇವೆ? ತಾವು ಹೇಳಿದ ಹಾಗೆ - It is a matter of great public importance ಇದು ಎಲ್ಲರಿಗೂ ಸಂಬಂಧ ಇದೆ. ಈ ಸಂಬಂಧಗಳಿಂದಾಗಿ ಸಾರ್ವಜನಿಕರಿಗೆ ಸಾಧ್ಯವಾದಷ್ಟು ಬೇಗ ನ್ಯಾಯ ಇದರ ಮೂಲಕ ಸಿಗಬೇಕು ಎನ್ನುವ ಕಾರಣಕ್ಕಾಗಿ- Establishing of Special Court to try S.C. No.9, this is what exactly pending before the Sessions Court, Bangalore SC 9/2001 pending in the Sessions Court, Bangalore. 4ನೇ ಜನವರಿಗೆಯಲ್ಲಿ ನಾವು ಬರೆದಿದ್ದೇವೆ. ಇದನ್ನು ನಾನು ಓದಿಬಿಡುತ್ತೇನೆ. It should be on record.

"The Government after considering the revenue loss to the State, the sensitivity of the case and the interests of the public at large, has taken a conscientious decision to request the Hon'ble High Court to establish a Special Court at Bangalore to try exclusively Sc No.9/2001 pending on the file of City Civil and Sessions Court, Bangalore relating to fake stamp and stamp papers..." This is the urgency. ಸರ್ಕಾರಕ್ಕೆ ಈ ಅರ್ಜೆನ್ಸಿ ಒಂದು ಕಡೆ ಇದೆ. ಆದ್ದರಿಂದ ಸ್ಪೆಷಲ್ ಕೋರ್ಟ್ ಮಾಡುತ್ತೇವೆ ಎಂದು ಹೇಳಿದರೆ ಇದರರ್ಥ ಸ್ಪೀಡೀ ಡಿಸ್‌ಪೋಸಲ್. We are not intereferring with the Court's matter. It is only speedy disposal. ಬೇಗ ಪೂರೈಸಿಕೊಡುವುದಕ್ಕಾಗಿ ಈ ವಿಶೇಷ ನ್ಯಾಯಾಲಯ ಮಾಡುತ್ತೇವೆ ಎಂದು ಹೇಳಿದ್ದೇವೆ. ಅದನ್ನೇ ರಾಜ್ಯಪಾಲರ ಭಾಷಣದಲ್ಲಿ ಬರೆದಿದ್ದೇವೆ. ಇದರ ಹಿಂದೆ ಇರತಕ್ಕಂತ ಭಾವನೆಗಳನ್ನು ಅವರು ಅರ್ಥಮಾಡಿಕೊಳ್ಳಬೇಕು. ಸರ್ಕಾರಕ್ಕೆ ಸಾಧ್ಯವಾದಷ್ಟು ಬೇಗ ಈ culprits should be brought to book ಅನ್ನುವಂಥ ಒಂದು ಸಿದ್ಧಾಂತದ ಮೇಲೆ ವಿಶೇಷ ನ್ಯಾಯಾಲಯ ಮಾಡುತ್ತೇವೆ ಎಂದು ಹೇಳಿದರೆ ಅದು ಸಬ್‌ಜುಡೀಸ್ ಹೇಗೆ ಆಗುತ್ತದೆ? ಚರ್ಚೆ ಮಾಡುವುದಕ್ಕೆ ಸಬ್‌ಜುಡೀಸ್ ಆಗುತ್ತದೆ. ಆದರೆ ವಿಶೇಷ ನ್ಯಾಯಾಲಯ ಮಾಡತಕ್ಕಂತಾದ್ದಕ್ಕೆ ರಾಜ್ಯ ಸರ್ಕಾರ ತನ್ನ ವ್ಯಾಪ್ತಿಯಲ್ಲಿ ಇರತಕ್ಕಂಥ ಅಧಿಕಾರವನ್ನು ಬಳಸಿ ಉಚ್ಚ ನ್ಯಾಯಾಲಯದವರಲ್ಲಿ ಪ್ರಾರ್ಥನೆ ಮಾಡಿದ್ದೇವೆ. ಅವರು ಯಾವುದು ಹೇಳಿದರೂ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ. ಮತ್ತೊಂದು ಮುಖ್ಯವಾದ ಪ್ರಶ್ನೆಯನ್ನು ಶ್ರೀಮಾನ್ ಬಚ್ಚೇಗೌಡರು ಎತ್ತಿದರು. ಸಬ್‌ಜುಡೀಸ್ ಆಗಬೇಕು ಎನ್ನುವ ಕಾರಣಕ್ಕಾಗಿ ಯಾವುದೋ ಒಂದು ರಿಟ್ ಪಿಟಿಶನ್ ಅನ್ನು ಕೋರ್ಟಿನಲ್ಲಿ ಹಾಕಿಬಿಡುವುದು ಎಂದು. ಇಲ್ಲಿ ಸರ್ಕಾರ ಇಷ್ಟೆಲ್ಲಾ ಆಸಕ್ತಿ ವಹಿಸಿ ವಿಶೇಷ ನ್ಯಾಯಾಲಯ ಮಾಡಬೇಕೆಂದು ಹೇಳಿರುವಾಗ, ಕರ್ನಾಟಕ ಪೊಲೀಸರಿಗೆ

ನಾವು ಕಾಂಪ್ಲಿಮೆಂಟ್ಸ್ ಕೊಡಬೇಕು. ಸಿ.ಬಿ.ಐ.ನಲ್ಲಿ ತನಿಖೆ ಆಗದೇ ಇರತಕ್ಕಂಥ ಎಂಥೆಂಥ ಕೇಸ್‌ಗಳನ್ನೆಲ್ಲಾ ಅವರು ಹೊರತಂದಿದ್ದಾರೆ. ಈಗ ಕಂಬಾರಪಲ್ಲಿ ಪ್ರಕರಣವನ್ನು ಸಿ.ಬಿ.ಐ.ಗೆ ರೆಫರ್ ಮಾಡಿ ಎಂದು ಹೇಳಿದರು. ಅದು ಏನಾಯಿತು? ಇಲ್ಲಿಯೂ ಅದನ್ನೇ ಕೇಳುತ್ತಿದ್ದೀರಿ. ಇದು ಡಿಲೇ ಟ್ಯಾಕ್ಟಿಕ್ಸ್ ಆಗುತ್ತದೆ. ನಮಗೆ ಸ್ಪೀಡಿ ಡಿಸ್‌ಪೋಸಲ್ ಆಫ್ ದಿ ಕೇಸ್ ಆಗಬೇಕು and the culprits should be brought to book. That is out intention. ಆದ್ದರಿಂದ ಸ್ಪೆಶಲ್ ಕೋರ್ಟ್ ಮಾಡಿ ಎಂದು ಕೇಳಿದ್ದೇವೆ. ಅದರಲ್ಲಿ ಯಾವ ಇಂಟರ್‌ಫಿಯರೆನ್ಸ್ ಇಲ್ಲ. ಯಾರು ಪಬ್ಲಿಕ್ ಇಂಟರೆಸ್ಟ್ ರಿಟ್‌ಪಿಟಿಶನ್ ಹಾಕಿದ್ದಾರೆ, ಆ ಮನುಷ್ಯ ಯಾರು, ಅವರ ಬಗ್ಗೆ ನಾನು ರೆಫರ್ ಮಾಡುವುದಿಲ್ಲ. Because he is not a member of this House. Therefore, I can not refer; but I can only quote the writ petition numbers and the cases that are pending. ಆದ್ದರಿಂದ ಎಸ್‌ಸಿ 9 ಎಂದು ಇದೆ. ಇನ್ನೊಂದು ರಿಟ್‌ಪಿಟಿಶನ್‌ನಂಬರ್ ನಾನು ಹೇಳಿದ್ದು. ಇದು ಎರಡೂ ಸೇರಿ ನಾವು ಇಲ್ಲಿ ಚರ್ಚೆ ಮಾಡುವುದರಿಂದ ಇಲ್ಲಿ ಡಿಸ್‌ಪೋಸಲ್‌ಗೂ ತೊಂದರೆಯಾಗುತ್ತದೆ, ಅಲ್ಲಿ ಡಿಸ್‌ಪೋಸಲ್‌ಗೂ ತೊಂದರೆಯಾಗುತ್ತದೆ. ಆದ್ದರಿಂದ - It may.... it is our honest commitment. ಮತ್ತೊಂದು ವಿಚಾರವೆಂದರೆ, ಅವರು ಕೊಟ್ಟಿರತಕ್ಕಂಥ ನೋಟೀಸ್‌ನ್ನು ತಾವು ಗಮನಿಸಬೇಕು. ಅದು ಬಹಳ ಇಂಟರೆಸ್ಟಿಂಗ್ ಆಗಿ ಇದೆ. ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್‌ನಲ್ಲಿ ಏನು ಹೇಳುತ್ತಾರೆ? 'ನಕಲಿ ಛಾಪಾ ಕಾಗದದ ಬೃಹತ್ ಜಾಲವೊಂದು ರಾಜ್ಯದಲ್ಲಿ ಹಲವಾರು ವರ್ಷಗಳಿಂದ ನಡೆಯುತ್ತಿದೆ.... ಇದು ಹಲವಾರು ವರ್ಷಗಳಿಂದ ನಡೆಯುತ್ತಾ ಇರತಕ್ಕಂಥ ಪ್ರಕರಣವಾಗಿರುವಾಗ ಅಡ್ಜರ್ನಮೆಂಟ್ ಮೋಷನ್‌ಗೆ ಹೇಗೆ ಬರುತ್ತದೆ? ಇದರ ಬಗ್ಗೆ ತಾವು ಹೇಳಬೇಕು. ನಿನ್ನೆ ಮೊನ್ನೆ ಆಗಿರತಕ್ಕಂಥ ಪ್ರಸಂಗ, ಇದ್ದರೆ ತುರ್ತಾಗಿ ಸಭೆಯ ಗಮನಕ್ಕೆ ತರಬೇಕು. ಎರಡನೆಯದು 'ನಿರಂತರ ಕಾರ್ಯನಿರ್ವಹಿಸಿ ಹತ್ತು ಸಾವಿರ ಕೋಟಿ ರೂಪಾಯಿಗಳ ವಹಿವಾಟು ನಡೆಸಿದ್ದಲ್ಲದೆ ರಾಷ್ಟ್ರದ ಹಲಾವರು ರಾಜ್ಯಗಳಲ್ಲಿ......how are we concerned. How can it become adjournment motion? 'ವಿಸ್ತಾರಗೊಂಡಿದ್ದು ಈ ಜಾಲ ವ್ಯವಸ್ಥಿತವಾಗಿ ನಡೆಸಲು ಹಲವಾರು ಹಿರಿಯ ಪೋಲೀಸರು......' ಇಲ್ಲಿ ಯಾವುದೇ ಒಂದು ಡೆಫೆನೆಟ್ ಮ್ಯಾಟರ್ ಆಫ್ ಪಬ್ಲಿಕ್ ಇಂಪಾರ್ಟೆನ್ಸ್ ಇಲ್ಲ. ಪಬ್ಲಿಕ್ ಇಂಪಾರ್ಟೆನ್ಸ್‌ನ ಸಿಂಗಲ್ ಮ್ಯಾಟರ್ ಏನಿರಬೇಕು, ಅದು ಇಲ್ಲಿ ಇಲ್ಲ. ಆದ್ದರಿಂದ ಶ್ರೀಮಾನ್ ರಾಮಯ್ಯನವರು ಹೇಳಿದ ಹಾಗೆ ಇದು ಎಷ್ಟು ವರ್ಷಗಳಿಂದ ನಡೆಯುತ್ತಿತ್ತು? ಹತ್ತಾರು ವರ್ಷಗಳು ಎಂದು ತಾವೇ ಒಪ್ಪಿಕೊಂಡಿದ್ದೀರಿ. ಆದ್ದರಿಂದ ಇದು ಇವತ್ತು ನಿನ್ನೆಯದಲ್ಲ.....

ಶ್ರೀ ಅರಗ ಜ್ಞಾನೇಂದ್ರ: ಇವರು ಅಪರಾಧಿಗಳಿಗೆ ಒಳ್ಳೆಯ ವಕೀಲರು.

SRI D.B.CHANDREGOWDA: The motion shall not deal with any matter which is under adjudication in courts. ಇದು ನಮ್ಮ ಪ್ರೊಸೀಜರ್‌ನಲ್ಲಿದೆ. ಆದ್ದರಿಂದ...

ಶ್ರೀ ಬಿ.ಸೋಮಶೇಖರ್: ಮುಂದೆ ಓದಿ.

ಶ್ರೀ ಜಗದೀಶ್ ಶೆಟ್ಟರ್: ನಿಯಮ 63ನ್ನು ಸ್ವಲ್ಪ ಓದಿಬಿಡುತ್ತೇನೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಆದ್ದರಿಂದ ಮಾನ್ಯ ಅಧ್ಯಕ್ಷರೇ, even on merits, this adjournment motion does not hold any water, even on the question of law ಕೋರ್ಟಿನಲ್ಲಿ ಪೆಂಡಿಂಗ್ ಇರುವುದರಿಂದ ಇದನ್ನು ಚರ್ಚೆ ಮಾಡುವುದು ಅನುಚಿತವಾಗುತ್ತದೆ ಎನ್ನತಕ್ಕಂಥ ಸಬ್‌ಮಿಶನ್ ಅನ್ನು ತಮ್ಮ ಮೂಲಕ ಹೇಳುತ್ತೇನೆ. ಇದನ್ನು ತೆಗೆದುಕೊಳ್ಳಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಚಂದ್ರೇಗೌಡರು ಬಹಳಷ್ಟು ಟ್ವಿಸ್ಟ್ ಮಾಡಿ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವೈ.ಕೆ.ರಾಮಯ್ಯ: ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಜಗದೀಶ್ ಶೆಟ್ಟರ್: ಎಷ್ಟು ಪಾಯಿಂಟ್ ಆಫ್ ಆರ್ಡರ್‌ಗಳು? ಪ್ರತಿಯೊಂದಕ್ಕೂ ಪಾಯಿಂಟ್ ಆಫ್ ಆರ್ಡರ್ ಎಂದರೆ ಹೇಗೆ?

ಅಧ್ಯಕ್ಷರು: ಆಗ ಇನ್‌ಫಾರ್ಮೇಷನ್ ಕೇಳಿದರು. ಈಗ ಪಾಯಿಂಟ್ ಆಫ್ ಆರ್ಡರ್ ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಈಗ ಒಂದು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಇನ್ನೂ ಡಿಸಿಶನ್ ಆಗಿಲ್ಲ. ಮತ್ತೆ ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರೆ ಇದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ಅವರು ಹೇಳಲಿ. ಹೇಳಿ.

ಶ್ರೀ ವೈ.ಕೆ.ರಾಮಯ್ಯ: ಈಗ ಸನ್ಮಾನ್ಯ ಸಚಿವರು ಸಬ್‌ಜುಡೀಸ್ ಆಗುತ್ತದೆ, ಅದಕ್ಕೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ವ್ಯಾಖ್ಯಾನ ನಡೆದಿದೆ. ತಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. It is a right; I do not dispute. ನಿಲುವಳಿ ಸೂಚನೆಯನ್ನು ಈ ಸದನದ ಮುಂದೆ ತರುವುದಕ್ಕೆ

ಅವರಿಗೆ ಹಕ್ಕು ಇದೆ. ಆದರೆ ಈ ನಿಲುವಳಿ ಸೂಚನೆಯನ್ನು ತರುವಂಥ ಹಕ್ಕನ್ನು ಚಲಾಯಿಸಬೇಕಾದರೆ - Subjected to certain restrictions ಎಂದು 62ರಲ್ಲಿ ಇದೆ. The restrictions are: "It should be of a recent occurrence; public importance." ಎಂದು ಇದೆ. ನಾನು ಹೇಳುವಂಥಾದ್ದನ್ನು ತಾವು ಕೇಳಬೇಕು. ಮುಂದೆ ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. It should be of a recent occurrence, ಎಂದು ಕೂಡ ರಿಸ್ಟ್ರಿಕ್ಷನ್ ಇದೆ. ಅದಕ್ಕೇ ಇದು ಯಾವ ಅವಧಿಗೆ ಸಂಬಂಧಪಟ್ಟಿದ್ದು ಎಂದು ನಾನು ಕೇಳಿದ್ದು. ನನಗಿನ್ನೂ ಮಾಹಿತಿ ಬಂದಿಲ್ಲ. If it is of recent occurrence ಅಂತ ಅವರು ಹೇಳಿದರೆ, ಇದು ನಿನ್ನೆಯೋ, ಮೊನ್ನೆಯೋ, ಹೋದ ತಿಂಗಳೋ, ಕಳೆದ ತಿಂಗಳೋ ಎಂದು ಹೇಳಿದರೆ - I have no point of order. Otherwise, I have a point of order.

ಅಧ್ಯಕ್ಷರು: ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ವೈ.ಕೆ.ರಾಮಯ್ಯ: ರೀಸೆಂಟ್ ಅಕ್ಕರೆನ್ಸ್ ಎನ್ನತಕ್ಕಂಥ ರಿಸ್ಟ್ರೀಕ್ಷನ್ ಇದೆ. ಅದು ಇಲ್ಲದಿದ್ದರೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲವೆಂಬುದು ನನ್ನ ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು: ರಾಮಯ್ಯನವರೇ, ಎಲ್ಲಾ ವಿಷಯಗಳ ಬಗ್ಗೆ ನಾನು ರೂಲಿಂಗ್ ಕೊಡುತ್ತೇನೆ. ಐದು ನಿಮಿಷ ಕಾಯಿರಿ.

ಶ್ರೀ ವೈ.ಕೆ.ರಾಮಯ್ಯ: ಯಾವ ಅವಧಿಗೆ ಎನ್ನುವುದು ಬೇಕು. ಅವರಿಗೆ ಚರ್ಚೆ ಮಾಡುವುದಕ್ಕೆ ಹಕ್ಕಿದೆ. ಅದನ್ನು ನಾನು ಡಿಸ್‌ಪ್ಯೂಟ್ ಮಾಡುವುದಿಲ್ಲ.

MR.SPEAKER: Wait for two or three minutes.

ಶ್ರೀ ವೈ.ಕೆ.ರಾಮಯ್ಯ: ಯಾವ ಅವಧಿಗೆ ಸಂಬಂಧಪಟ್ಟಿದ್ದು ಎಂದು ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು: ಚಂದ್ರೇಗೌಡರು ಹಳೆಯದು ಎಂದು ಹೇಳಿದ್ದಾರೆ.

ಶ್ರೀ ವೈ.ಕೆ.ರಾಮಯ್ಯ: ಆದರೆ ಅವರೂ ಹೇಳಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಈ ನಿಯಮಾವಳಿಯ ನೆರಳಿನಲ್ಲಿ ಅಪರಾಧಿಗಳನ್ನು ಬಚಾವು ಮಾಡುವುದಕ್ಕೆ ನಾವು ನೋಡಬಾರದು. ಅಪರಾಧಿಗಳನ್ನು ಹೊರಗೆಳೆಯಬೇಕೆಂಬುದು ಇಲ್ಲಿ ಇರುವಂಥಾದ್ದು. ಅದನ್ನು ನಾವೆಲ್ಲರೂ ಯೋಚನೆ ಮಾಡಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ರೂಲ್ 63ನ್ನು ನಾನು ಓದುತ್ತೇನೆ.

"No motion which seeks to raise discussion on a matter pending before any statutory tribunal or statutory authority performing any judicial or quasi-judicial furnctions or any commission or court of enquiry appointed to enquire into or investigate any matter, shall ordinarly be permitted to be moved:

Provided that the Speaker may in his discretion allow such matter being raised in the House as is concerned with the procedure or subject or stage of enquiry, if the Speaker is satisfied that it is not likely to prejudice the consideration of such matter by the statutory tribunal, statutory authority commission or court of enquirty."

12.10 ಪಿಎಂ

ಇದು ಕ್ಲಿಯರ್ ಆಗಿದೆ. ಮಾನ್ಯ ಚಂದ್ರೇಗೌಡರು, ವಿಷಯದ ಬಗ್ಗೆ ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಫೈಲ್ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದರಲ್ಲಿ ಏನು ವಿಷಯವಿದೆ ಎನ್ನುವುದನ್ನು ಸದನದ ಮುಂದೆ ಮಂಡನೆ ಮಾಡಲಿಲ್ಲ. ಸುಮ್ಮನೆ ಒಂದು ರಿಟ್ ಪಿಟಿಷನ್ ನಂಬರ್ ಹೇಳಿದರು. ಆದರೆ ಅದರಲ್ಲಿ ಯಾವ ವಿಷಯವಿದೆ, ಕೋರ್ಟ್‌ನಲ್ಲಿ ಡಿಸ್ಪೈಟ್ ಆಗುವಂಥಾದ್ದು ಏನು? ಇಲ್ಲಿ ನಾವು ಚರ್ಚೆ ಮಾಡುವಂಥ ವಿಷಯವೇನು? ಎನ್ನುವುದರ ಬಗ್ಗೆ ಅವರು ಹೇಳಬೇಕಾಗಿತ್ತು. ಆದರೆ ಈಗ ನಾವು ಇಲ್ಲಿ ಡಿಸ್ಕಸ್ ಮಾಡುವಂಥಾದ್ದು ಇತ್ತೀಚೆಗೆ ನಡೆದಿರತಕ್ಕಂಥ ಘಟನೆಯ ಬಗ್ಗೆ ಎಂದು ಹೇಳುತ್ತಿದ್ದೇನೆ. ಕಳೆದ ವರ್ಷ ಸುಮಾರು 12 ಕೋಟಿ ರೂಪಾಯಿಗಳಷ್ಟು ಖೋಟಾ ಸ್ಟ್ಯಾಂಪ್ ಪೇಪರ್‌ಗಳನ್ನು ನಮ್ಮ ಪೊಲೀಸರು ಪತ್ತೆ ಹಚ್ಚಿದ್ದಾರೆ. ಇದರಲ್ಲಿ ಯಾರ್‍ಯಾರು ಆರೋಪಿಗಳು ಎನ್ನುವುದು ಇತ್ತೀಚೆಗೆ ಹೊರಗೆ ಬರುತ್ತಿದೆ. ಮೊನ್ನೆಮೊನ್ನೆ ಅರೆಸ್ಟ್ ಆಗಿದ್ದಾರೆ. ಅಬ್ದುಲ್ ಕರೀಂ ಲಾಲಾ ತೆಲಗಿ ಅರೆಸ್ಟ್ ಆಗಿದ್ದು ಇತ್ತೀಚೆಗೆ. ಹೀಗಾಗಿ, ಈ ವಿಷಯವನ್ನು ನಾವು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಿಷಯ ಕೋರ್ಟಿನಲ್ಲಿ ಇದೆ ಎಂದು ಹೇಳಿದರು. ಅಬ್ದುಲ್ ಕರೀಂ ಲಾಲಾನ ಮೇಲೆ ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಸಾಕಷ್ಟು ಕ್ರಿಮಿನಲ್ ಕೇಸುಗಳು ಫೈಲ್ ಆಗಿವೆ. ಕೋರ್ಟಿನಲ್ಲಿ ಕ್ರಿಮಿನಲ್ ಕೇಸ್ ಆಗಿದೆ, ಸಿವಿಲ್ ಕೇಸ್ ಆಗಿದೆ, ಹೈಕೋರ್ಟಿನಲ್ಲಿ ರಿಟ ಪಿಟಿಷನ್ ಫೈಲ್ ಆಗಿದೆ ಎಂದರೆ ಇದರ ಬಗ್ಗೆ ಚರ್ಚೆ ಮಾಡುವುದೇ ಬೇಡವೇ? ಸ್ಪೆಷಲ್ ಕೋರ್ಟ್ ಎಸ್ಟಾಬ್ಲಿಷ್ ಮಾಡಲು ಮಾನ್ಯ ಹೈಕೋರ್ಟಿನವರಿಗೆ

ಕೇಳಿಕೊಂಡಿದ್ದೇವೆ ಎಂದು ಚಂದ್ರೇಗೌಡರು ಹೇಳಿದರು. ಹಾಗಾದರೆ ಇದನ್ನು ಏಕೆ ಕೇಳಿದರು? ಎಲ್ಲಿಯವರೆಗೆ ಇನ್‌ವೆಸ್ಟಿಗೇಷನ್ ಆಗುವುದಿಲ್ಲ, ಚಾರ್ಜ್ ಷೀಟ್ ಹಾಕುವುದಿಲ್ಲ, ಆರೋಪಿಗಳ ಪಟ್ಟಿನ್ನು ಹಾಜರುಪಡಿಸುವುದಿಲ್ಲ, ಅಲ್ಲಿಯವರೆಗೆ ಎನ್‌ಕ್ವೈರಿ ಹೇಗೆ ಪ್ರಾರಂಭವಾಗುತ್ತದೆ? ಕೋರ್ಟ್‌ನಲ್ಲಿ ಟ್ರಯಲ್ ಹೇಗೆ ಪ್ರಾರಂಭವಾಗುತ್ತದೆ? ನೀವು ಹೈಕೋರ್ಟಿನಲ್ಲಿ ಪಿಟಿಷನ್ ಫೈಲ್ ಮಾಡಲು ನಿಮಗೆ ಕಾಸ್-ಆಫ್-ಆ್ಯಕ್ಷನ್ ಇಲ್ಲ. ಕಾಸ್-ಆಫ್--ಆ್ಯಕ್ಷನ್ ಇಲ್ಲದೇ ನೀವು ಸ್ಪೆಷಲ್ ಕೋರ್ಟ್ ಎಸ್ಟಾಬ್ಲಿಷ್ ಮಾಡಲು ಕೇಳುತ್ತಿದ್ದೀರಿ. ಸ್ಪೆಷಲ್ ಕೋರ್ಟ್ ಕೇಳುವುದು ಯಾವಾಗ? ನಿಮ್ಮ ಬಳಿ ಸಾಕ್ಷಿ ಪುರಾವೆಗಳು ಇರಬೇಕಲ್ಲವೇ? ನಿಮ್ಮದೆಲ್ಲಾ ಮೆಟೀರಿಯಲ್‌ಗಳು ರೆಡಿ ಇರಬೇಕಲ್ಲವೇ? ನಿಮ್ಮದೆಲ್ಲಾ ರೆಡಿ ಇದ್ದಾಗ, ಬೇರೆಬೇರೆ ಕೋರ್ಟ್‌ಗಳಲ್ಲಿ ಟ್ರಯಲ್ ಮಾಡಿದರೆ ಲೇಟ್ ಆಗುತ್ತದೆ, ಡಿಲೇ ಆಗುತ್ತದೆ ಎನ್ನುವುದಕ್ಕೋಸ್ಕರ ಸ್ಪೆಷಲ್ ಕೋರ್ಟ್ ಮಾಡುವಂಥಾದ್ದು ಆಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಪ್ಪು ಮಾಹಿತಿ ರಿಕಾರ್ಡ್‌ನಲ್ಲಿ ಹೋಗಬಾರದು. 15-11-2000ದಂದೇ ಚಾರ್ಜ್‌ಷೀಟ್ ಹಾಕಿದ್ದೇವೆ. ಈಗ ಅಲ್ಲ, ಒಂದು ವರ್ಷದ ಹಿಂದೆಯೇ 12-13 ಜನ ಅಕ್ಯೂಸ್ಡ್‌ಗಳನ್ನು ಅರೆಸ್ಟ್ ಮಾಡಿದ್ದೇವೆ. ಇದರಲ್ಲಿ ಏನನ್ನೂ ಮುಚ್ಚಿಡುವಂಥಾದ್ದು ಅಥವಾ ಯಾರಿಗೋ ರಕ್ಷಣೆ ಕೊಡುವಂಥಾದ್ದೇನೂ ಇಲ್ಲ. ನೀವು ಮಾಡದೇ ಇರತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗುವಂಥಾದ್ದು ಆಗಬಾರದು. ಇವತ್ತು ರಾಜ್ಯ ಸರ್ಕಾರ ರಾಜ್ಯದ ಜನತೆಗೆ ಮಿಸ್-ಕಾನ್ಸೆಪ್ಷನ್ ಕೊಡುತ್ತಿದೆ. ಇದು ಆಗಬಾರದು. ನೀವು 12 ಕೋಟಿ ರೂಪಾಯಿಗಳ ಫೇಕ್ ಸ್ಟ್ಯಾಂಪ್ ಪೇಪರ್ ಅನ್ನು ಸೀಜ್ ಮಾಡಿದಿರಿ, ಕೇಸ್ ಹಾಕಿದಿರಿ, ಅಬ್ದುಲ್ ಕರೀಂ ಲಾಲಾನ ಮೇಲೆ ಕೇಸ್ ಹಾಕಿದಿರಿ, ಆದರೆ ಅವನನ್ನು ಇತ್ತೀಚೆಗೆ ಅರೆಸ್ಟ್ ಮಾಡಿದಿರಿ. ನಿಮಗೆ ಈ ಬಗ್ಗೆ ಸೂಚನೆ ಬಂದಾಗಲೂ ಅವನನ್ನು ಯಾರೂ ಅರೆಸ್ಟ್ ಮಾಡಲಿಲ್ಲ. ಆದರೆ ಪೊಲೀಸ್ ಕಮೀಷನರ್ ಆದ ಸಾಂಗ್ಲಿಯಾನಾರವರಿಗೆ ಈ ವಿಷಯ ಗೊತ್ತಾದಾಗ ಅವನ ಅರೆಸ್ಟ್ ಆಯಿತು. ಸಾಂಗ್ಲಿಯಾನಾ ಅವರು ಪರ್ಸನಲ್ ಇನ್‌ವೆಸ್ಟಿಗೇಷನ್ ಮಾಡಿದ್ದಾರೆ. ಅವನ ಸ್ಟೇಟ್‌ಮೆಂಟ್ ತೆಗೆದುಕೊಂಡಿದ್ದಾರೆ. ಆ ಸ್ಟೇಟ್‌ಮೆಂಟನಲ್ಲಿ.......

ಅಧ್ಯಕ್ಷರು: ದಯವಿಟ್ಟು ಇಲ್ಲಿ ಕ್ರಾಸ್ ಎಕ್ಸಾಮಿನೇಷನ್ ಬೇಡ. Don't take it on

---

XXX ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

record.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸಾಂಗ್ಲಿಯಾನಾ ಎಂದರೆ ಅವರು ಸರ್ಕಾರ ಅಲ್ಲವೇ? ಅವರು (XXX) ಅವರೂ ಸರ್ಕಾರವೇ.

ಶ್ರೀ ಜಗದೀಶ್ ಶೆಟ್ಟರ್: ಈ ಕೇಸ್ ಮುಚ್ಚಿ ಹಾಕಲು ನೀವು ಪೊಲೀಸ್ ಕಮೀಷನರ್‌ರವರ ಮೇಲೆ ಒತ್ತಡ ತರುತ್ತಿದ್ದೀರಿ. ಸಿಬಿಐ ಎನ್‌ಕ್ವೈರಿಗೆ ಕೊಡಬೇಕು ಎಂದು ಪತ್ರ ಬರೆದಿದ್ದಾರೆ, ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈಗ ಇಲ್ಲಿ ನಾನು ಹೇಳುವಂಥಾದ್ದು ಏನೆಂದರೆ, ಈ ವಿಷಯ ಕೋರ್ಟಿನಲ್ಲಿ ಇದೆ ಎನ್ನುವ ಒಂದೇ ಕಾರಣಕ್ಕಾಗಿ, ಇದನ್ನು ಚರ್ಚೆ ಮಾಡಬಾರದೆಂದು ಹೇಳಿ, ಇದನ್ನು ಮುಚ್ಚಿ ಹಾಕುವಂಥ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು: ಯಾವುದೂ ದಾಖಲು ಮಾಡಬೇಡಿ.

(ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಅಧ್ಯಕ್ಷರು: ನಾನು ಶೆಟ್ಟರ್‌ರವರನ್ನು ಕರೆದಿದ್ದೇನೆ, ಮೊದಲು ಅವರು ಮುಗಿಸಲಿ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಲಾಸ್ಟ್ ಇಯರ್ ನಾವು ಚಾರ್ಜ್‌ಷೀಟ್ ಹಾಕಿದ್ದೇವೆ ಎಂದು ಹೇಳಿದರು. ಆದರೆ ಸ್ಪೆಷಲ್ ಕೋರ್ಟನ್ನು ಈಗ ಕೇಳುತ್ತಿದ್ದಾರೆ. ನೀವು ಕಳೆದ ವರ್ಷ ಜಾರ್ಜ್‌ಷೀಟ್ ಹಾಕಿದ್ದರೆ, ಕೂಡಲೇ ಆವತ್ತೇ ಸ್ಪೆಷಲ್ ಕೋರ್ಟ್ ಕೇಳಬಹುದಿತ್ತಲ್ಲ? ಇವತ್ತು ಏಕೆ ಈ ಪ್ರಸಂಗ ಬಂತು? ಆದ್ದರಿಂದ ಸಬ್ಸಿಕ್ವೆಂಟ್ ಈವೆಂಟ್ಸ್‌ಗಳನ್ನು ಕೇಳುತ್ತಿದ್ದೇವೆ. ಇದರಲ್ಲಿ (XXX) ಇವರ ಸಪೋರ್ಟ್ ಇಲ್ಲದಿದ್ದರೆ, ಅಬ್ದುಲ್ ಕರೀಂನಂಥ 10 ಸಾವಿರ ಕೋಟಿಗಳಷ್ಟು ಖೋಟಾ ಸ್ಟ್ಯಾಂಪ್ ಪೇಪರ್ ಅನ್ನು ಪ್ರಿಂಟ್ ಮಾಡುತ್ತಿರಲಿಲ್ಲ, ಮಾರಾಟ ಮಾಡುತ್ತಿರಲಿಲ್ಲ. ಹೀಗಾಗಿ ಇದು ದೊಡ್ಡ ಜಾಲ ಇರುವಂಥ ಈ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಇದರಲ್ಲಿ ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನುವ ಪದವನ್ನು ಬಳಸಿದ್ದಾರೆ. ಅದನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಅಧ್ಯಕ್ಷರು: ಆ ಪದಗಳನ್ನು ತೆಗೆದುಹಾಕಿ. ರಾಜಕಾರಣಿಗಳು ಎಂದರೆ ಅದು

XXX ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಎಸ್.ಸುರೇಶ್ ಕುಮಾರ್: ರಾಜಕಾರಣಿಗಳು ಶಾಮೀಲಾಗಿದ್ದಾರೆ ಎನ್ನುವುದು ತಪ್ಪಾದರೆ, XXX ಬಗ್ಗೆ ಗೃಹ ಸಚಿವರು ಹೇಳಿರುವುದೂ ಕೂಡ ತಪ್ಪು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರೆಕಾರ್ಡ್‌ಗೆ ಹೋಗಲಿ ಎಂದು ನಾನು ಹೇಳಲಿಲ್ಲ, ಅದು ರೆಕಾರ್ಡ್‌ಗೆ ಹೋಗಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್: ಏಕೆ ಹೋಗಲಿಲ್ಲ? ನೀವು ಹೇಳುವುದು ರೆಕಾರ್ಡ್‌ಗೆ ಹೋಗುವುದಿಲ್ಲವೇ? ನೀವು ಹೇಳುವುದು ನಮ್ಮ ಕಿವಿಗೆ ಕೇಳಿಸುತ್ತದೆ, ರೆಕಾರ್ಡಗೆ ಹೋಗುವುದಿಲ್ಲ ಎಂದರೆ ಹೇಗೆ? ಇದಕ್ಕೆ ಉತ್ತರ ಕೊಡಿ. ಇದು ರೆಕಾರ್ಡ್‌ಗೆ ಹೋಗಬೇಕೇ, ಬೇಡವೇ ಎಂದು ಹೇಳಿ. ಒಬ್ಬ ಗೃಹಸಚಿವರಾಗಿ ಅವರು, XXX ಹೇಗೆ ಈ ರೀತಿ ಹೇಳುತ್ತಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: XXX ಅವರು ಸರ್ಕಾರಿ ನೌಕರರು. ಆದ್ದರಿಂದ, ಸರ್ಕಾರದ ವತಿಯಿಂದಲೇ ಅವರು ಕೆಲಸ ಮಾಡಿದ್ದು, ಬೇರೆ ಏನೂ ಅಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ. ಅದಕ್ಕೆ ನಾನು ಸ್ಟಿಕ್‌ಆನ್ ಆಗಿರುತ್ತೇನೆ.

ಅಧ್ಯಕ್ಷರು: ಅದನ್ನು ಎಕ್ಸ್‌ಪಂಜ್ ಮಾಡಿ. ಈಗ ಸೋಮಶೇಖರ್ ಅವರೇ ಕೊನೆ. ನಂತರ ನಾನು ಯಾರನ್ನೂ ಅಲೋ ಮಾಡುವುದಿಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೇ, ಈ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ, ಇದನ್ನು ಚರ್ಚೆ ಮಾಡಿದರೆ ಪ್ರಿಜ್ಯುಡೀಸ್ ಆಗಬಹುದು ಸಬ್‌ಜುಡೀಸ್ ಆಗಬಹುದು. ಆದ್ದರಿಂದ ಅದನ್ನು ಚರ್ಚೆ ಮಾಡತಕ್ಕಂಥಾದ್ದು ಸರಿಯಲ್ಲ ಎನ್ನುವ ವಾದವನ್ನು ಚಂದ್ರೇಗೌಡರು ಸರ್ಕಾರದ ವತಿಯಿಂದ ಹೇಳಿದ್ದಾರೆ. ರೂಲ್ 150ರ 2ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆ ಎಂದರೆ,

"Provided that the Speaker may in his discretion allow such matter being raised in the House as is concerned with the procedure or subject or stage of enquiry if the Speaker is satisfied that is is not likely to prejudice the consideration of such matter by the statutory tribunal...."

ಅಂದರೆ, ಯಾವ ವಿಚಾರವನ್ನು ನಾವು ಚರ್ಚೆ ಮಾಡುತ್ತೇವೆ, ಆ ವಿಚಾರ ಕೋರ್ಟ್ ಮುಂದೆ ಇದ್ದು, ಅದಕ್ಕೆ ಇನ್‌ಫ್ಲೂಯೆನ್ಸ್ ಆಗುವುದಾದರೆ ಅದನ್ನು ಚರ್ಚೆ

XXX ಸನ್ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಾಡತಕ್ಕಂಥಾದ್ದು ಸೂಕ್ತ ಅಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾರ್ವಜನಿಕವಾಗಿ ಮಹತ್ತರವಾದ ವಿಚಾರವಾದರೆ ಚರ್ಚೆಗೆ ಅವಕಾಶ ಮಾಡಿಕೊಡಬಹುದು ಎಂದೂ ಸಹ ಇದೆ. ಮಾನ್ಯ ಗೃಹ ಸಚಿವರು ತಾವು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದಿರಿ. ಹಿಂದೆ ನಾನು ಮಂತ್ರಿಯಾಗಿದ್ದಾಗ, ನನ್ನ ಮೇಲೆ ಒಂದು ನೇರವಾದಂಥ ಆಪಾದನೆ ಪತ್ರಿಕೆಗಳಲ್ಲಿ ಬಂತು. ಅದರ ಬಗ್ಗೆ ಚರ್ಚೆ ನಡೆಯಿತು. ಆಗ ನಾನು ರಾಜೀನಾಮೆ ಕೊಟ್ಟೆ ಈಗ ಒಬ್ಬ ಮಂತ್ರಿಗಳ ಬಗ್ಗೆ ಪತ್ರಿಕೆಗಳಲ್ಲೂ ಬಂದಿದೆ, ವಿರೋಧ ಪಕ್ಷದವರೂ ನೇರವಾಗಿ ಆಪಾದನೆ ಮಾಡಿದ್ದಾರೆ. ಆ ವಿಚಾರವೇನೂ ಕೋರ್ಟ್ ಮುಂದೆ ಇಲ್ಲ. Nobody has filed chargesheet against Minister, but on whom charges were made by the opposition. Should we not discuss that issue concerning the Minister? ಇಡೀ ರಾಜ್ಯಾದ್ಯಂತ ಪತ್ರಿಕೆಗಳಲ್ಲಿ ಬಂದಿದೆ, ಮಂತ್ರಿಗಳ ಮೇಲೆ ನೇರವಾದ ಆಪಾದನೆ ಬಂದಿದೆ. ಆ ವಿಚಾರ ನ್ಯಾಯಾಲಯದ ಮುಂದೆ ಇಲ್ಲ. ನ್ಯಾಯಾಲಯದಲ್ಲಿ ಇರುವಂಥ ಕೇಸ್ ಮೇಲೆ ಯಾವುದೇ ರೀತಿಯಲ್ಲೂ ಇನ್‌ಫ್ಲೂಯೆನ್ಸ್ ಆಗುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಒಂದು ನಿರ್ದೇಶನ ಕೊಡಿ. ಕೋರ್ಟ್ ಮುಂದೆ ಇರತಕ್ಕಂಥ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಬಾರದು. ಅವು ಯಾವುವು ಎಂದು ಹೇಳಿ. ಆದರೆ ಇಂಥ ಮಹತ್ತರವಾದಂಥ ವಿಚಾರವನ್ನು ಯಾವುದೋ ಒಂದು ತಾಂತ್ರಿಕ ಕಾರಣದಿಂದ ಕತ್ತು ಹಿಸುಕತಕ್ಕಂಥದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರಿಗೂ ಶೋಭೆ ತರತಕ್ಕಂಥಾದ್ದು ಅಲ್ಲ. ಇಂಥ ವಿಚಾರಗಳನ್ನು ಚರ್ಚೆ ಮಾಡಲಿಕ್ಕೇ ಇಂಥ ಸಭೆಗಳು ಇರುವುದು. ಆದ್ದರಿಂದ, ನಾನು ಹೇಳತಕ್ಕಂಥಾದ್ದು ಏನೆಂದರೆ, ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಅಲ್ಲದಿದ್ದರೂ,........

(ಗೊಂದಲ)

ನಾನು ಮಾತನಾಡಿದ ಮೇಲೆ ಬೇಕಾದರೆ ನೀವು ಮಾತನಾಡಿ; ಚಿಂತೆ ಇಲ್ಲ. ನನಗೆ ಹಕ್ಕಿದೆ ನಾನು ಮಾತನಾಡುತ್ತೇನೆ.

ಶ್ರೀ ಕರಿಯಣ್ಣ: ಅವರು ಒಂದು ಶಬ್ದ ಹೇಳಿದರು. ರಾಜಕೀಯ ಎಂದರು. ಇದರಲ್ಲಿ ರಾಜಕೀಯ ಏನು ಬರುತ್ತದೆ? ಈಗಾಗಲೇ ಕೇಸ್ ಹಿಡಿದಿದೆ, ಎಲ್ಲಾ ಆಗಿದೆ.

ಶ್ರೀ ಬಿ.ಸೋಮಶೇಖರ್: ಅಧ್ಯಕ್ಷರೇ, ಕೊನೆಯದಾಗಿ ತಮ್ಮಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ, ಇಂತಹ ವಿಚಾರಗಳನ್ನು ಕೇವಲ ಒಂದು ತಾಂತ್ರಿಕ ಕಾರಣಗಳಿಂದ ಚರ್ಚೆಗೆ ಅವಕಾಶ ಕೊಡಬಾರದು ಎಂದು ಹೇಳಿದೆಯಲ್ಲಾ ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಡೀ ಜನತೆಗೆ, ಸಾರ್ವಜನಿಕರಿಗೆ ಅಪಚಾರ ಎಸಗತಕ್ಕ ವಿಚಾರ.

ಆದ್ದರಿಂದ, ಕೊನೆಯ ಪಕ್ಷ ನಿಯಮ 69ರ ಅಡಿಯಲ್ಲಾದರೂ ಕೂಡ ಇದರ ಬಗ್ಗೆ ಸಂಪೂರ್ಣ ಚರ್ಚೆಗೆ ಅವಕಾಶ ಕೊಡಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

SRI D.V.SADANANDAGOWDA: "If the subject matter of the adjournment motion consists of two parts and a part becomes sub-judice, after leave of the House to the moving of the adjournment motion has been granted, the discussion has to be restricted to the part which is not sub-judice. The speaker has ruled out the objection and the entire motion need not be proceeded with such a case".

ಅಧ್ಯಕ್ಷರು: ನಾನು ಆ ಭಾಗವನ್ನು ಪೂರ್ಣವಾಗಿ ಓದಿದ್ದೇನೆ. ಸಬ್‌ಜ್ಯುಡೀಸ್ ಎಂದರೆ ಏನು ಎಂಬುದನ್ನೆಲ್ಲಾ ಓದಿದ್ದೇನೆ. Yesterday, I have read it entirely.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಸೋಮಶೇಖರ್‌ರವರು ಬಹುಶಃ ರಿಟ್ ಪಿಟಿಷನ್ ಅನ್ನು ನೋಡಿಲ್ಲವೆಂದು ಕಾಣುತ್ತದೆ. ಅವರು ಚರ್ಚೆ ಮಾತ್ರ ಮಾಡಿದ್ದಾರೆ. ಸಾಧ್ಯವಾದಷ್ಟು ಎಲ್ಲಾ ಮಾಹಿತಿಗಳನ್ನು ಇಟ್ಟುಕೊಂಡು ಚರ್ಚೆ ಮಾಡಿದರೆ ಒಳ್ಳೆಯದು. ಇದು ಪ್ರಾರಂಭವಾಗಿದ್ದೇ ಅವರ ಕಾಲದಲ್ಲಿ, ಅವರು ಕಂದಾಯ ಮಂತ್ರಿಗಳಾಗಿದ್ದ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ಇದೇನೂ ಹೊಸದಲ್ಲ.

ಮಾನ್ಯ ಸದಸ್ಯರು: ಮಾನ್ಯ ಚಂದ್ರೇಗೌಡರೇ, ಕಳ್ಳತನ ಬಹಳ ದಿವಸದಿಂದ ಆಗಿದೆ, ಆದರೆ ಕಳ್ಳರು ಸಿಕ್ಕಿರುವುದು ಈಗ.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಎಬಿ.ಮಲ್ಲಿಕಾರ್ಜುನ್: ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಈ ಸದನದ ಸದಸ್ಯರಾಗಿರತಕ್ಕಂಥ ಮಾಜಿ ಕಂದಾಯ ಸಚಿವರಾದ ಸೋಮಶೇಖರ್‌ರವರ ಮೇಲೆ, ನಿಮ್ಮ ಕಾಲದಲ್ಲಿ ಇದು ಪ್ರಾರಂಭವಾಗಿದ್ದು ಎಂದು ಅಲಿಗೇಷನ್ ಮಾಡಿದ್ದಾರೆ. He has to give notice for that.

ಶ್ರೀ ಬಿ.ಎನ್.ಬಚ್ಚೇಗೌಡ: ಇದು ಯಾರ ಕಾಲದಲ್ಲಿ ಆಗಿದ್ದು ಎಂಬುದನ್ನು ಹೇಳಬೇಕು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಈ ಸದನದ ಸದಸ್ಯರು ಹಾಗೂ ಮಾಜಿ ಕಂದಾಯ ಸಚಿವರಾದ ಶ್ರೀ ಸೋಮಶೇಖರ್‌ರವರ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ: ನಿಮ್ಮ ನೋಟೀಸುಗಳೆಲ್ಲವನ್ನೂ ತಂದಿದ್ದೇನೆ.

ಅಧ್ಯಕ್ಷರು: ಮಲ್ಲಿಕಾರ್ಜುನ್ ಅವರೇ, ನೀವು ಆಮೇಲೆ ಮಾತನಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಅವರ ಮಾಹಿತಿಗೋಸ್ಕರ, ಕೋರ್ಟಿನಲ್ಲಿರತಕ್ಕಂಥ ವಿಷಯ ಸ್ಪೆಸಿಫಿಕ್ಕಾಗಿ, ಅವರು ಹೇಳಿದ ಹಾಗೆಯೇ ಅಫಿಡೆವಿಟ್‌ನಲ್ಲಿ ಒಂದು ಪೋರ್ಷನ್, ಏನಿದೆ ಎಂದರೆ,

"I have sought for the mandamus directing the Respondent to refer the multi-crore stamp paper racket to C.B.I. (that is the case you are arguing today) for investigating and to arrest the persons who are involved in the said racket. Incidentally, I have also sought for the relief directing the respondent to drop Roshan baig, Tourism and Wakf Minister from the Cabinet of the Government of Karnataka to facilitate C.B.I. Agency...."

ನೀವು ಏನು ಸಂಬಂಧ ಎಂದು ಕೇಳಿದಿರಲ್ಲಾ, ಸಂಬಂಧ ಇರುವುದರಿಂದಲೇ ಚರ್ಚೆ ಮಾಡುವುದು ಬೇಡ ಎಂದು ಹೇಳಿದೆ. How is he involved? ....That is exactly the subject matter before the Court. Therefore, till pending disposal of the case, let us not discuss ಎಂದು ಹೇಳಿದೆ.

MR.SPEAKER: Except Mr.Scindia, I do not allow anybody. Please don't stand up.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೇ, ಬಹಳ ಪ್ರಮುಖವಾಗಿ ನಮ್ಮ ಸದನದ ಸದಸ್ಯರಾಗಿರತಕ್ಕಂಥ ಮಾನ್ಯ ವೈ.ಕೆ.ರಾಮಯ್ಯನವರು "ರೀಸೆಂಟ್ ಅಕ್ಕರೆನ್ಸ್" ಆಗಿರಬೇಕು ಎಂದು ಹೇಳಿದ್ದಾರೆ. ಈ ರೀಸೆಂಟ್ ಅಕ್ಕರೆನ್ಸ್ ಎಂದರೆ ಯಾವುದು? ನನ್ನ ತಿಳುವಳಿಕೆ ಏನೆಂದರೆ, ಹಿಂದಿನ ಅಧಿವೇಶನ ಮತ್ತು ಈ ಅಧಿವೇಶನಕ್ಕೂ ಮಧ್ಯೆ ನಡೆದಿರತಕ್ಕದ್ದೇ ರೀಸೆಂಟ್ ಅಕ್ಕರೆನ್ಸ್, ನೀವು ಕಾನ್‌ಸ್ಟಿಟ್ಯೂಷನ್ ಆಬ್ಲಿಗೇಷನ್ ಡ್ಯೂಟೀಸನ್ನು ಫುಲ್‌ಫಿಲ್ ಮಾಡುವುದಕ್ಕೆ ಫೆಬ್ರವರಿ ಮೂರರೊಳಗಡೆ ಅಧಿವೇಶನವನ್ನು ಏನು ಕರೆದಿದ್ದೀರಿ, ಇದಕ್ಕೂ ಅದಕ್ಕೂ ಸುಮಾರು ಹೆಚ್ಚು ಕಡಿಮೆ ಆರು ತಿಂಗಳು ಆಗಿದೆ. ಈ ಆರು ತಿಂಗಳಲ್ಲಿ ನಡೆದಿರತಕ್ಕ ಘಟನಾವಳಿಗಳನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ, ಅದೇ ರೀಸೆಂಟ್ ಅಕ್ಕರೆನ್ಸ್ ಎಂದು ಭಾವಿಸಬೇಕಾಗುತ್ತದೆ. ಇನ್ನು ಎರಡನೆಯದಾಗಿ, ಈ

ಸದನದಲ್ಲಿ ಕೋರ್ಟಿನಲ್ಲಿರತಕ್ಕ ವಿಚಾರಗಳು ಯಾವತ್ತೂ ಚರ್ಚೆಯಾಗಿಲ್ಲವೇ? ಮಾನ್ಯ ಅಧ್ಯಕ್ಷರೇ, ಚರ್ಚೆ ಆಗಿದೆ. ಬಹಳ ಪ್ರಮುಖವಾಗಿ ಈ ವಿಧಾನ ಸಭೆಯ ಕಟ್ಟಡವೂ ಇರತಕ್ಕಂಥ ಕಬ್ಬನ್ ಪಾರ್ಕಿನ ವಿಚಾರದಲ್ಲಿ, ಹೈಕೋರ್ಟಿನಲ್ಲಿ ಅನೇಕ ರಿಟ್ ಪಿಟಿಷನ್‌ಗಳು ಪೆಂಡಿಂಗ್ ಇದ್ದಂಥ ಸಂದರ್ಭದಲ್ಲೂ ತಮ್ಮ ಸ್ಥಾನದಲ್ಲಿ ಕುಳಿತಿದ್ದಂಥ ಅನೇಕ ನಾಯಕರುಗಳು, ಈ ಸದನದಲ್ಲಿ ಕೋರ್ಟಿನಲ್ಲಿದ್ದಂಥ ಅನೇಕ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾನು ಒಂದೇ ಒಂದು ಪ್ರಿಸಿಡೆಂಟನ್ನು ಕೋಟ್ ಮಾಡುತ್ತಿದ್ದೇನೆ. ನನಗೆ ತಿಳುವಳಿಕೆ ಇರುವ ಹಾಗೆ ವಿಧಾನ ಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಮತ್ತು ಲೋಕಸಭೆಯಲ್ಲಿ ಈ ರೀತಿ ಚರ್ಚೆಯಾಗಿರತಕ್ಕಂಥಾದ್ದು ಬಹಳಷ್ಟು ಇವೆ. ಇನ್ನು ಮೂರನೆಯದು, ತಾವು ಕೆಲವು ಪದಗಳನ್ನು ಒಳ್ಳೆಯ ಅರ್ಥದಲ್ಲಿ ಹೇಳಿದ್ದರೂ ಸಹಿತ, ತಾವು ಅದನ್ನು ಕಡತದಿಂದ ತೆಗೆದು ಹಾಕಿಸಿದ್ದೀರಿ; ಸಂತೋಷ. ಆದರೆ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಇವತ್ತು ರೋಷನ್ ಬೇಗ್‌ರವರ ಹೆಸರನ್ನು ವಿರೋಧ ಪಕ್ಷದವರು ಯಾರೂ ಈ ಸದನದಲ್ಲಿ ಹೇಳಿಲ್ಲ. ಏಕೆಂದರೆ, ನಮಗೂ ಗೊತ್ತಿದೆ. ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರವಾಗಿ, ಯಾವುದೇ ಮಂತ್ರಿಗಳ ಮೇಲೆ ನಾವು ಚಾರ್ಜಸ್ ಮಾಡಬೇಕಾದರೆ, ಅವರಿಗೂ ಕೂಡ ನೋಟೀಸ್ ಕೊಡಬೇಕಾಗುತ್ತದೆ. ತಮಗೂ ಕೊಡಬೇಕಾಗುತ್ತದೆ. ನಾವು ಬರೆದು ಕಳುಹಿಸಬೇಕಾಗುತ್ತದೆ. ಆದ್ದರಿಂದ, ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಿದವರೇ ಸರ್ಕಾರದವರು. ಅವರ ಒಳಜಗಳವೋ, ಅಥವಾ ಭಿನ್ನಾಭಿಪ್ರಾಯವೋ ಯಾವ ಕಾರಣದಿಂದಲೋ ನನಗಂತೂ ಗೊತ್ತಿಲ್ಲ ಸ್ವಾಮಿ. ರೋಷನ್ ಬೇಗ್‌ರವರ ಹೆಸರನ್ನು, ಕೋರ್ಟಿನಲ್ಲಿರತಕ್ಕ ವಿಚಾರವನ್ನು ಅವರು ಏಕೆ ಇಲ್ಲಿ ಬರುವ ಹಾಗೆ ಮಾಡಿದರೋ ನಮಗೆ ಗೊತ್ತಿಲ್ಲ. ನಾನು ಸಭಾನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾನು ಪ್ರಾರಂಭದಲ್ಲೇ ಹೇಳಿದೆ. ಮಾನ್ಯ ಖರ್ಗೆಯವರು ಆಗ ಇರಲಿಲ್ಲ. ನಾನು ಏನು ಹೇಳಿದೆ ಎಂದರೆ, ಈ ಕಡೆ ಕುಳಿತಿರತಕ್ಕಂಥ ನಾವು, ಕರ್ನಾಟಕದ ಪೊಲೀಸರ ಬಗ್ಗೆ ಗೌರವ ಇಟ್ಟುಕೊಂಡಿದ್ದೇವೆ! ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹೇಳಿದಾಗ ನಾನು ಇಲ್ಲಿಯೇ ಇದ್ದೆ. ನೀವು ಹೇಳಿದ್ದೂ ಕೇಳಿಸಿಕೊಂಡಿದ್ದೇನೆ. ನೀವು ಮಾಡಿದ್ದೂ ನೋಡಿದ್ದೇವೆ. ಏಕೆ ಸುಮ್ಮನೆ ಆಪಾದನೆ ಮಾಡುತ್ತೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾವು ಮಾಡಲೇಬೇಕು, ನಾವು ಇರುವುದೇ ಅದಕ್ಕಾಗಿ. ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರುವುದೇ ಇದನ್ನೆಲ್ಲಾ ಹೇಳುವುದಕ್ಕೆ. ನಾನೇನು ಮೂಗಬಸವನೇ, ಕುಳಿತುಕೊಂಡು ಕೇಳುವುದಕ್ಕೆ; ಅಥವಾ ತಲೆ ಅಲ್ಲಾಡಿಸುವುದಕ್ಕೆ? ಆದ್ದರಿಂದ ನಾನು ಹೇಳಲೇಬೇಕಾಗುತ್ತದೆ. ನಾನು ತಮಗೆ ಮತ್ತು ಮಾನ್ಯ

ಸಭಾನಾಯಕರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ರಾಜಕಾರಣಿಗಳು ಇರಬಹುದು ಅಥವಾ ತಾವು ಹೇಳಿರತಕ್ಕಂಥ ಜನ ಇರಬಹುದು ಅಥವಾ ಅಧಿಕಾರಿಗಳು ಇರಬಹುದು, ಹತ್ತಾರು ವರ್ಷಗಳಿಂದ ನಮ್ಮ ಸರ್ಕಾರ ನಡೆದಂಥ ಸಂದರ್ಭದಲ್ಲೂ ಇರಬಹುದು. ಈ ರೀತಿ ನಡೆದಿರತಕ್ಕ ಎಲ್ಲಾ ದಾಖಲೆ ಪತ್ರಗಳು ಕಂದಾಯ ಇಲಾಖೆಯಲ್ಲಿ ಮತ್ತು ಎಲ್ಲಾ ಕಡೆಯಲ್ಲಿ ಇರುತ್ತವೆ. ಆ ಹಿತದೃಷ್ಟಿಯಿಂದಾಗಿಯೇ ಈ ಅಗ್ನಿಪರೀಕ್ಷೆಯಿಂದ, ಸೀತೆಯ ಹಾಗೆ ಸರ್ಕಾರದವರು ಹೊರಬರಬೇಕಾದರೆ, ಇವತ್ತು ಆಡಳಿತ ನಡೆಸತಕ್ಕಂಥವರದ್ದು ಏನೂ ಇಲ್ಲ, ಹಿಂದಿನ ಸರ್ಕಾರದಲ್ಲಿ ಆಡಳಿತ ನಡೆಸಿದವರು ಕಾರಣ ಅಥವಾ ವ್ಯವಸ್ಥೆಯೇ ಕಾರಣ, ಇದು ಒಂದು ಭಾಗ. ನಾವೆಲ್ಲಾ ರಾಜಕೀಯ ಪಕ್ಷಗಳನ್ನು ಹೊರಗಡೆ ಬಿಟ್ಟುಬಂದರೂ ಸಹಿತ, ರಾಜಕೀಯ ಪಕ್ಷಗಳಿಂದಲೇ ಇಲ್ಲಿ ಆಯ್ಕೆಯಾಗಿ ಬಂದಿರತಕ್ಕಂಥಾದ್ದು. ಆದ್ದರಿಂದ, ಇದರ ಬಗ್ಗೆ ತಾವು ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅಗ್ನಿಪರೀಕ್ಷೆಯಲ್ಲಿ ಇವರು ತಮ್ಮ ಸತ್ವಪರೀಕ್ಷೆ ಮಾಡಿಕೊಳ್ಳಬೇಕಾದರೆ, ಸರ್ಕಾರದವರೂ ಸಹಿತ ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ನಿಲುವಳಿ ಸೂಚನೆ ಮೇಲಾದರೂ ಅವಕಾಶ ಮಾಡಿಕೊಡಿ ಅಥವಾ ಬೇರೆ ರೀತಿಯಲ್ಲಾದರೂ ಮಾಡಿಕೊಡಿ. ಬೇಕಾದರೆ ನಿಬಂಧನೆಗಳನ್ನು ಹಾಕಿ. ಕೋರ್ಟಿನಲ್ಲಿ ಯಾವ ವಿಷಯ ಇದೆ, ಅದನ್ನು ಇಲ್ಲಿ ಚರ್ಚೆ ಮಾಡುವುದು ಬೇಡ. ಬಾಕಿ ವಿಚಾರಗಳನ್ನೆಲ್ಲಾ ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಸಬ್‌ಜುಡೀಸ್ ಆಗುತ್ತದೆ ಎಂದು ಈ ಕುರಿತು ಹೇಳಿದರು. ಹೈಕೋರ್ಟ್‌ನ ರಿಟ್‌ಪಿಟೀಷನ್ಸ್ ನಂಬರ್ ಹೇಳುತ್ತೇನೆ. ಅವರು ಯಾರು ಎಂದು ನಾನು ಹೇಳುವುದಿಲ್ಲ ಎಂದರು. ಯಾರನ್ನು ತನಿಖೆಗೆ ಒಳಪಡಿಸಿ ಎಂದು ಅರ್ಜಿದಾರರು ಮನವಿ ಸಲ್ಲಿಸಿದ್ದಾರೆ ಎಂಬ ವಿವರಗಳನ್ನೂ ಕೂಡ ತಾವು ವಿವರ ಕೊಡಲಿಲ್ಲ.....

(ಗೊಂದಲ)

SRI D.B.CHANDREGOWDA: If it is a public document, and if you are interested, you can take it. I am not here to give. It is your job.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ತಾವುಗಳು ಕಾನೂನು ಸಚಿವರಾಗಿದ್ದವರು ಹಾಗೂ ವಕೀಲರೂ ಕೂಡ ಆಗಿದ್ದೀರಿ. ತಾವುಗಳು ಬಹಳ ಈಸೀ ಆಗಿ I just quote the Writ Petition Number. Remaining things ಹೇಳುವುದಿಲ್ಲವೆಂದು ಹೇಳಿದ್ದೀರಿ. ರಿಟ್‌ಪಿಟೆಶನ್ಸ್‌ನಲ್ಲಿ ಅರ್ಜಿದಾರರು ಯಾರು

ಫಿರ್ಯಾದುದಾರರು ಯಾರು ಎಂಬುದನ್ನು ತಾವುಗಳು ಸದನಕ್ಕೆ ಹೇಳಬಹುದಲ್ಲವೇ? ದಯವಿಟ್ಟು ಸದನಕ್ಕೆ ತಾವುಗಳು ಹೇಳಿ...

ಶ್ರೀ ಡಿ.ವಿ.ಸದಾನಂದಗೌಡ: ನಾವು ಚರ್ಚೆ ಮಾಡುತ್ತೇವೆಂದು ಹೇಳುತ್ತಾ ಇದ್ದೇವೆ, ನೀವು ಕೋರ್ಟಿನಲ್ಲಿರುವ ಕಾರಣ ಚರ್ಚೆ ಮಾಡಬಾರದು ಎಂದು ಹೇಳುತ್ತಿದ್ದೀರಿ.... ಆ ವಿವರಗಳನ್ನು ಕೊಡಿ...

SRI D.B.CHANREGOWDA: I am not here to supply all that you want. ನೀವೇ ಆ ವಿವರಗಳನ್ನು ತರಿಸಿಕೊಳ್ಳಬಹುದಲ್ಲವೇ?

ಶ್ರೀ ಡಿ.ವಿ.ಸದಾನಂದಗೌಡ: ಒಮ್ಮೆ ನೀವು ಓದಿದ ಮೇಲೆ ಅದು ಹೌಸ್ ಪ್ರಾಪರ್ಟಿ. ಆದ್ದರಿಂದ ಅದನ್ನು ಸದನದಲ್ಲಿ ಮಂಡನೆ ಮಾಡಿ. ಮಂಡನೆ ಮಾಡಿದರೆ ಸದನಕ್ಕೆ ವಿವರಗಳು ತಿಳಿಯುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ: ಅವರು ಪ್ರಸ್ತಾಪ ಮಾಡಿದ್ದರಿಂದ ಅವರಿಗೆ ಹೇಳಿದ್ದೇನೆ....ಅಷ್ಟೇ.... ವಿಷಯ ತಿಳಿಸಿದ್ದೇನೆ. ಎರಡನೆಯದಾಗಿ ಯಾರು ಈ ಸದನದ ಸದಸ್ಯರು ಅಲ್ಲವೋ ಅವರ ಹೆಸರನ್ನು ಇಲ್ಲಿ ಹೇಳುವ ಕೆಲಸವನ್ನು ನಾನು ಮಾಡುವುದಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಕಾನೂನು ಸಚಿವರು he is shielding certain matters; he should come out in the House. ಏನು ವಿಷಯ ಎಂದು ಹೇಳಬಹುದಲ್ಲವೇ? ಏಕೆ ಹೇಳಬಾರದು?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ನಾವು ಯಾವುದನ್ನು ಚರ್ಚೆ ಮಾಡಬೇಕೆಂದು ಹೇಳುತ್ತೇವೆ. ಯಾವುದು ಚರ್ಚೆ ಮಾಡತಕ್ಕದ್ದಲ್ಲ, ಯಾವುದು ಸಬ್‌ಜ್ಯುಡೀಸ್ ಆಗುತ್ತದೆ ಎಂಬುದನ್ನು ಅವರು ಹೇಳಲಿ. ಅವರ ಕೈಯಲ್ಲಿ ಹೈಕೋರ್ಟ್‌ನ ರಿಟ್‌ಪಿಟೀಷನ್ ಉಂಟಲ್ಲಾ? ಅದನ್ನು ಹೇಳಲು ಅವರು ಏಕೆ ಶೀಲ್ಡ್ ಮಾಡುತ್ತಾ ಇದ್ದಾರೆ? It is a House property.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಅಲ್ಲಿ ರಿಟ್ ಪಿಟಿಷನರ್ಸ್ ಯಾರು, ಪ್ರತಿವಾದಿಗಳು ಯಾರು ಎನ್ನುವುದರ ಬಗ್ಗೆ ಯಾರಿಗೆ ನೋಟೀಸ್ ಜಾರಿ ಆಗಿದೆ, ಯಾರು ಪ್ರತಿವಾದಿಗಳು ಎಂದು ಅವರ ಹೆಸರನ್ನು ಹೇಳುವುದಕ್ಕೆ ಕೂಡ ಇವರು ಸಿದ್ಧರಾಗಿಲ್ಲ. ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು, ನಾಯಕರು, ಇಲ್ಲಿದ್ದಾರೆ, ತಾವುಗಳು ದಯಮಾಡಿ ಅದನ್ನು ತರಿಸಿಕೊಂಡು ಸದನಕ್ಕೆ ಹೇಳಿ ಸ್ವಾಮಿ......

MR.SPEAKER: No arguments and counter-arguments. Whether it is

sub judice or not, is the question before us.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರು, ತಾವುಗಳು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಬೇಕು..... ಈಗಾಗಲೇ ಇಷ್ಟೊಂದು ಚರ್ಚೆಯಾಗಿದೆ. ನಾವು ಹೇಳುತ್ತಿರತಕ್ಕಂಥಾದ್ದು ಸಾರ್ವಜನಿಕ ಮಹತ್ವ ಇರತಕ್ಕಂಥ ವಿಚಾರ........

ಶ್ರೀ ಡಿ.ವಿ.ಸದಾನಂದಗೌಡ: ತಾವುಗಳು ತಮ್ಮ ಸಹವರ್ತಿಯನ್ನು ರಕ್ಷಣೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಾ ಇದ್ದೀರಿ......

ಶ್ರೀ ಡಿ.ಬಿ.ಚಂದ್ರೇಗೌಡ: ನಾನೆಲ್ಲಿ ರಕ್ಷಣೆ ಮಾಡುತ್ತಿದ್ದೇನೆ? ನಿಮಗೆ ಚರ್ಚೆ ಮಾಡಬೇಕೆಂಬ ಆಸಕ್ತಿ ಇದ್ದರೆ, you must take the materials..

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಇವೊತ್ತು ಸರಕಾರ ಯಾವುದೋ ವಿಚಾರವನ್ನು ಮುಚ್ಚಿಟ್ಟುಕೊಂಡು ಹೋಗುತ್ತಾ ಇದೆ. ರಿಟ್ ಪಿಟಿಷನ್ ಕಾಪಿಯನ್ನು ಸದನದಲ್ಲಿ ಮಂಡನೆ ಮಾಡಿ ಎಂದು ಹೇಳಿದರೆ ಇವರಿಂದ ಅದು ಆಗುತ್ತಾ ಇಲ್ಲ. ಹಾಗಾದರೆ ಅದರ ವಿವರಗಳು ತಮ್ಮ ಗಮನಕ್ಕೆ ಬರಬೇಕಲ್ಲವೇ? ರಿಟ್‌ಪಿಟಿಷನ್‌ನಲ್ಲಿ ಏನಿದೆ, ಏನು ವಿವರಗಳಿವೆ ಎಂದು ಸದನಕ್ಕೆ ತಿಳಿಯಬೇಕಲ್ಲವೇ? ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಷಯ.

ಅಧ್ಯಕ್ಷರು: ನಾನು ಪ್ರತಿಯೊಬ್ಬರು ಹೇಳಿದ್ದನ್ನೂ ಕೂಡ ಕೇಳಿದ್ದೇನೆ...

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ ಇದೊಂದು ಸಾರ್ವಜನಿಕ ಮಹತ್ವವಾದ ವಿಷಯ. ನಿಜವಾಗಿಯೂ ಸರಕಾರಕ್ಕೆ ರಾಜ್ಯದ ಹಿತದೃಷ್ಟಿಯಿಂದ ರಾಜ್ಯದ ಆದಾಯವನ್ನು ಉಳಿಸಿಕೊಳ್ಳುವುದಕ್ಕೆ ಆಸಕ್ತಿ ಇದ್ದರೆ, ಯಾರು ಈ ಪ್ರಕರಣದ ಆರೋಪಿಗಳು ಇದ್ದಾರೆ, ಅವರು ಯಾರೋ ಪ್ರಮುಖ ವ್ಯಕ್ತಿಗಳೇ ಇರಬಹುದು, ಇದರಲ್ಲೆ ಪ್ರಮುಖವಾಗಿರುವ ವ್ಯಕ್ತಿಯನ್ನು ನಾನಿಲ್ಲಿ ಮೆನ್‌ಷನ್ ಮಾಡುತ್ತೇನೆ. ಇವೊತ್ತು ಸಚಿವ ಸಂಪುಟದಲ್ಲಿ ಮಂತ್ರಿಗಳಾಗಿರತಕ್ಕಂಥ ಮಾನ್ಯ ರೋಶನ್‌ಬೇಗ್‌ರವರ ಸಹೋದರ ಇದರಲ್ಲಿ ಇನವಾಲ್ವ್‌ಮೆಂಟ್ ಇದ್ದಾರೆ. ಆದ್ದರಿಂದ ಅವರಿಗೆ ನೈತಿಕವಾಗಿ ಅಧಿಕಾರದಲ್ಲಿ ಮುಂದುವರಿಯಲು ಬರುವುದಿಲ್ಲ. ಈ ಪ್ರಕರಣವನ್ನು ಸೀದಾ ಸಿ.ಬಿ.ಐ.ಗೆ ಇನ್ವೆಸ್ಟಿಗೇಷನ್‌ಗೆ ಕೊಡಬೇಕಾಗುತ್ತದೆ. ಅದರ ಸಲುವಾಗಿ ಚರ್ಚೆಯಾಗಬೇಕಾಗುತ್ತದೆ. ನನಗೇನನ್ನಿಸುತ್ತದೆ, ಬಹುಶಃ ಇವೊತ್ತು ನಮ್ಮ ರಾಜ್ಯ ಸರಕಾರ ಮಾನ್ಯ ಮಂತ್ರಿಯವರಾದ ರೋಶನ್ ಬೇಗ್‌ರವರನ್ನು ಹಾಗೂ ಹಿರಿಯ ಅಧಿಕಾರಿಗಳನ್ನು ರಕ್ಷಣೆ ಮಾಡಲಿಕ್ಕೆ ಹೊರಟಿದೆ ಎಂದು ಕಾಣುತ್ತದೆ. ಹೀಗಾಗಿ ಸದನದಲ್ಲಿ ಚರ್ಚೆಗೆ ಅವಕಾಶವನ್ನು ಕೊಡುತ್ತಾ ಇಲ್ಲ. ನಾವು ಚರ್ಚೆ ಮಾಡಲು ತಯಾರಾಗಿದ್ದೇವೆ. ಇಡೀ ದಿನವೂ ಚರ್ಚೆ

ಮಾಡಲು ಸಾಕಷ್ಟು ವಿಷಯಗಳಿವೆ, ಸಾಕಷ್ಟು ವಿಚಾರಗಳನ್ನು ಸರಕಾರದ ಗಮನಕ್ಕೆ ತರತಕ್ಕಂಥವುಗಳಿವೆ. ಯಾರು ಇವರಿಗೆ ಮಾಹಿತಿಗಳನ್ನು ಕೊಟ್ಟಿದ್ದಾರೆ. ಅಂಥ ಶ್ರೀ ಜಯಂತ್ ತಿನೇಕರ್‌ರವರನ್ನು ಕರೆಸಿ ಮಾತನಾಡತಕ್ಕಂಥ ಒಂದು ಕೆಲಸವನ್ನು ಸರಕಾರ ಮಾಡಿಲ್ಲ. ಇವೊತ್ತು ರಾಜ್ಯ ಸರಕಾರ ಈ ಮಂತ್ರಿಯನ್ನು ಮತ್ತು ರಾಜಕೀಯ ವ್ಯಕ್ತಿಗಳನ್ನು ಪೊಲೀಸ್ ಅಧಿಕಾರಿಗಳನ್ನು ರಕ್ಷಣೆ ಮಾಡಲು ಹೊರಟಿದೆ. ಅದಕ್ಕಾಗಿ ನಾವಿಲ್ಲಿ ಇವೊತ್ತು ಪ್ರೊಟೆಸ್ಟ್ ಮಾಡುತ್ತಾ ಇದ್ದೇವೆ. ಧರಣಿ ಸತ್ಯಾಗ್ರಹವನ್ನು ನಾವು ಮುಂದುವರಿಸುತ್ತಾ ಇದ್ದೇವೆ.

(ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಬಾವಿಗೆ ಬಂದು ಧರಣಿ ನಡೆಸಿದರು)

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ತಾವುಗಳು ಇನ್ನೂ ರೂಲಿಂಗ್‌ನ್ನು ಕೊಟ್ಟಿಲ್ಲ, ಅವರು ಧರಣಿ ಹೇಗೆ ಮಾಡುತ್ತಾ ಇದ್ದಾರೆ?.... ಇದು ಬಹಳ ತಮಾಷೆಯಾಗಿ ಕಾಣುತ್ತಾ ಇದೆ. ರೂಲಿಂಗ್ ಕೊಡದೇ ಧರಣಿ ಕುಳಿತುಕೊಳ್ಳುವುದು ಹೇಗೆ ಎಂದು ಅರ್ಥವಾಗುತ್ತಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, 2001ರ ನವೆಂಬರ್ 25 ರಂದು ಕರ್ನಾಟಕ ಮಾತ್ರವಲ್ಲ, ಇಡೀ ಭಾರತದಲ್ಲಿರತಕ್ಕಂಥ ಪ್ರಿಸೈಡಿಂಗ್ ಆಫೀಸರ್ಸ್, ಲೀಡರ್ ಆಫ್ ದಿ ಅಪೋಸಿಷನ್, ಸಂಸದೀಯ ಮಂತ್ರಿಗಳು ಎಲ್ಲರನ್ನೂ ಕರೆದು ಮಾನ್ಯ ಲೋಕಸಭಾ ಅಧ್ಯಕ್ಷರು ಸಮಾವೇಶವನ್ನು ಮಾಡಿದ್ದರು. ಅಲ್ಲಿ ಮಾನ್ಯ ಪ್ರಧಾನ ಮಂತ್ರಿಯವರು ಅಪ್ಪಣೆ ಕೊಡಿಸಿದರು. ಈ ದೇಶದ ಪ್ರಧಾನ ಮಂತ್ರಿಗಳು ಸದನದಲ್ಲಿ ಯಾವ ಕಾರಣಕ್ಕೂ ಬಾವಿಗೆ ಹೋಗಬೇಡಿ ಎಂದು ಅಪ್ಪಣೆ ಕೊಡಿಸಿದ್ದರು.

(ಗೊಂದಲ)

ರಾಷ್ಟ್ರದ ಹಿರಿಯ ರಾಜಕಾರಣಿ, ಅತ್ಯಂತ ಯಶಸ್ವಿ ಸಂಸದೀಯ ಪಟು, ಈ ದೇಶದ ಅಗ್ರಮಾನ್ಯ ನಾಯಕರಾದಂಥ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಅಪ್ಪಣೆ ಕೊಡಿಸಿದ್ದರು.... ಯಾವ ಕಾರಣಕ್ಕೂ ಬಾವಿಗೆ ಹೋಗಬೇಡಿ ಎಂದು ಹೇಳಿದ್ದರು. ಆದರೆ ಇವರು ಮೊದಲು ಮಾಡಿದ ಕೆಲಸ ಅಂದರೆ ಅದನ್ನು ಡಿಫೈ ಮಾಡುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಾ ಇದ್ದೇನೆ. ಮಾನ್ಯ ಚಂದ್ರೇಗೌಡರವರು ನೀತಿಯನ್ನು ಹೇಳುವುದಕ್ಕೆ ಹೊರಟಿದ್ದಾರೆ. ಆ ನೀತಿ ಮತ್ತು ಸಂಹಿತೆಗಳು ನಾವೆಲ್ಲರೂ ಒಪ್ಪಿರತಕ್ಕಂಥವುಗಳು. ನಿನ್ನೆ ಬಿಸಿನೆಸ್ ಅಡ್ವೈಸರಿ

ಕಮಿಟಿಯಲ್ಲಿಯೂ ಕೂಡ ನಾವೆಲ್ಲರೂ ಚರ್ಚೆ ಮಾಡಿದ್ದೇವೆ. ಧರಣಿ ಮಾಡಬಾರದು ಎಂಬುದು ನಮ್ಮ ಅಭಿಪ್ರಾಯ ಎಂಬುದನ್ನು Who am I to stop that? It is for the Chair to decide.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸೋಮಶೇಖರ್‌ರವರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಸರಕಾರಕ್ಕೆ ಆಗತಕ್ಕಂಥ ನಷ್ಟದ ಬಗ್ಗೆ ಸರಕಾರದ ಗಮನಕ್ಕೆ ತಂದಿದ್ದಾರೆ. ಇದರ ಚರ್ಚೆಯ ಬಗ್ಗೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಒಪ್ಪಿಕೊಳ್ಳಬೇಕೆನ್ನತಕ್ಕಂಥಾದ್ದು ನಮ್ಮ ಆಗ್ರಹವಾಗಿದೆ. ಮಾನ್ಯ ಪ್ರಮುಖ ವಿರೋಧ ಪಕ್ಷದ 42 ಜನ ಸದಸ್ಯರು ಇಲ್ಲಿ ಧರಣಿ ಮಾಡತಕ್ಕಂಥ ಸಂದರ್ಭದಲ್ಲಿ ತಾವುಗಳು ಎದ್ದು ನಿಂತುಕೊಂಡು ತೀರ್ಪನ್ನು ಕೊಡಬಾರದು ಎಂಬುದು ನನ್ನ ಕಳಕಳಿಯ ಮನವಿ.

ಅಧ್ಯಕ್ಷರು:- ಹಾಗಾದರೆ ನಾನು ಏನು ಮಾಡಬೇಕೆಂದು ಹೇಳುತ್ತೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ತಾವುಗಳು ದಯಮಾಡಿ ಸರಕಾರಕ್ಕೆ ಹೇಳಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅವರು ಅದನ್ನು ಒಪ್ಪಿಕೊಳ್ಳಬೇಕು. ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಇದರಲ್ಲಿ ಅವ್ಯವಹಾರವಾಗಿದೆ, ದುರುಪಯೋಗವಾಗಿದೆ. ಸರಕಾರಕ್ಕೆ ಹಣ ಬರುತ್ತಾ ಇಲ್ಲ- ಎನ್ನತಕ್ಕಂಥಾದ್ದನ್ನು ಚರ್ಚೆ ಮಾಡಬೇಕೆಂದು ಹೇಳಿದಾಗಲೂ ಕೂಡ, ಅವಕಾಶ ಇಲ್ಲ, ವಿಚಾರ ಕೋರ್ಟ್‌ನಲ್ಲಿದೆ ಎಂಬ ಕುಂಟು ನೆಪವನ್ನು ತೋರಿಸಿ ನೀವು ಮಾಡುವುದಾದಲ್ಲಿ ನಾವು ತಮ್ಮ ಬಗ್ಗೆ ಅತ್ಯಂತ ಗೌರವವನ್ನು ಇಟ್ಟುಕೊಂಡು ಬಹಿಷ್ಕಾರ ಹಾಕುತ್ತಾ ಇದ್ದೇವೆ. ಇದರಲ್ಲಿ ನಾವು ಭಾಗವಹಿಸುವುದಕ್ಕೆ ಸಾಧ್ಯವಿಲ್ಲ. ಈ ಒಂದು ಚರ್ಚೆಗೆ ಯಾವುದೇ ಕಾರಣಕ್ಕೂ ಸಹಿತ ತಾವುಗಳು ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿ ಸದನದಿಂದ ಹೊರಗಡೆ ಹೋಗುತ್ತಾ ಇದ್ದೇವೆ.

(ಸರಕಾರದ ಧೋರಣೆಗೆ ಧಿಕ್ಕಾರ ಎಂದು ಹೇಳುತ್ತಾ ಜನತಾದಳ (ಯು) ಮತ್ತು (ಎಸ್) ಸದಸ್ಯರು ಸಭಾತ್ಯಾಗ ಮಾಡಿದರು.)

ನಾವು ಸ್ಪಷ್ಟವಾಗಿ ಹೇಳುತ್ತೇವೆ. ಪ್ರಶ್ನೋತ್ತರಗಳು ಆದ ಮೇಲೆ ಇವೆಲ್ಲವನ್ನೂ ತೆಗೆದುಕೊಳ್ಳಬೇಕೆಂದು ಪ್ರಾರಂಭದಲ್ಲಿಯೇ ನಾನು ಹೇಳಿದ್ದೇನೆ. ನಾವು ವಿರೋಧ ಪಕ್ಷದಲ್ಲಿದ್ದುಕೊಂಡು ಎಲ್ಲಾ ರೀತಿಯ ಸಹಕಾರಗಳನ್ನು ನಿಮಗೆ ಕೊಟ್ಟುಕೊಂಡು ಬಂದಿದ್ದೇವೆ. ಆದರೆ ತಾವುಗಳು ವಿಷಯದ ಚರ್ಚೆಗೆ ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಿದರೆ ಹೇಗೆ? ಕೋರ್ಟ್‌ನಲ್ಲಿ ಏನು ಪೆಂಡಿಂಗ್‌ನಲ್ಲಿದೆ ಅದನ್ನು ನಾವು ಚರ್ಚೆ ಮಾಡುವುದು ಬೇಡ. ಬಾಕಿ ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡಲು ಏಕೆ ಅವಕಾಶ ಕೊಡುತ್ತಿಲ್ಲ?

ಶ್ರೀ ಡಿ.ಬಿ.ಚಂದ್ರೇಗೌಡ:- ಕೋರ್ಟ್‌ನಲ್ಲಿರತಕ್ಕಂಥ ವಿಚಾರವನ್ನು ಇಲ್ಲಿ ಚರ್ಚೆ ಮಾಡಿದರೆ ಸಬ್‌ಜುಡೀಸ್ ಆಗುತ್ತದೆಂಬ ವಿಚಾರವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ. ತಾವು ಏನು ತಿರ್ಮಾನ ತೆಗೆದುಕೊಳ್ಳುತ್ತೀರಿ ಅದನ್ನು ನಾವು ಒಪ್ಪುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಹೇಗೆ ಸಬ್‌ಜ್ಯುಡೀಸ್ ಆಗುತ್ತದೆ? ಏಕೆ ಸಬ್‌ಜುಡೀಸ್ ಆಗುತ್ತದೆ? ಆದ್ದರಿಂದ ಮಾನ್ಯ ಅಧ್ಯಕ್ಷರೇ, ತಾವು ತೀರ್ಪು ಕೊಡಬೇಡಿ..... ದಯವಿಟ್ಟು ತಾವುಗಳು ಕೇಳಬೇಕು...... ಮಾನ್ಯ ಸೋಮಶೇಖರ್‌ರವರು ಏನೋ ವಿಚಾರಗಳನ್ನು ತಮ್ಮ ಗಮನಕ್ಕೆ ತರಲಿದ್ದಾರೆ. ಅದಾದ ಮೇಲೆ ತಾವುಗಳು ರೂಲಿಂಗ್ ಕೊಡಿ ಎಂದು ನಮ್ಮ ಪ್ರಾರ್ಥನೆ.... ದಯಮಾಡಿ ನಮ್ಮ ಮಾತುಗಳನ್ನು ಸ್ವಲ್ಪ ಕೇಳಬೇಕು ಸ್ವಾಮಿ......

ಅಧ್ಯಕ್ಷರು:- ಈಗಾಗಲೇ ಒಂದೂವರೆ ಗಂಟೆಯಿಂದ ತಮ್ಮೆಲ್ಲರ ಮಾತುಗಳನ್ನು ಕೇಳಿದ್ದೇನೆ.

ಶ್ರೀ ಬಿ.ಸೋಮಶೇಖರ್:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಯವರು ಮಾತನಾಡುವಾಗ ಒಂದು ಗುರುತರವಾದಂಥ ಆಪಾದನೆಯನ್ನು ನನ್ನ ಮೇಲೆಯೂ ಮಾಡಿದ್ದಾರೆ. ಈ ನಕಲಿ ಛಾಪಾ ಕಾಗದದ ಹಗರಣಗಳು ಹಿಂದೆ ಮಾನ್ಯ ಸೋಮಶೇಖರ್‌ರವರು ಮಂತ್ರಿಗಳಾಗಿದ್ದಾಗ ನಡೆದಿದೆ ಎನ್ನತಕ್ಕಂಥ ವಿಚಾರಗಳನ್ನು ಹೇಳಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಹತ್ತಾರು ವರ್ಷಗಳ ನಂತರವೇ..... ವಿಷಯಕ್ಕೆ ಸಂಬಂಧಪಟ್ಟದ್ದನ್ನು ಹೇಳಿ. ದಯವಿಟ್ಟು ವಿತಂಡ ವಾದವನ್ನು ಮಾಡಬೇಡಿ. ತಮ್ಮಂಥ ಸೀನಿಯರ್ ಲೀಡರ್ಸ್ ಹೀಗೆ ಮಾಡಬಾರದು.

ಶ್ರೀ ಬಿ.ಸೋಮಶೇಖರ್:- ಮಾನ್ಯ ಅಧ್ಯಕ್ಷರೇ, ನಮ್ಮ ಕಾಲದಲ್ಲಿ ಯಾವಾಗ ಹಗರಣ ಆಗಿದೆ? ನಾನು ಕಂದಾಯ ಸಚಿವನಾಗಿದ್ದಾಗ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಯಾರು ಅದನ್ನು ಅನುಷ್ಠಾನಕ್ಕೆ ತಂದಿಲ್ಲ, ಅದರಿಂದಾಗಿ ಏತಕ್ಕೆ ಹೀಗಾಗಿದೆ ಎಂಬಿತ್ಯಾದಿ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಇದು ಬಹಳ ಮಹತ್ತರವಾದಂಥ ವಿಚಾರ. ನಮ್ಮ ಸರಕಾರದಲ್ಲಿ ನಾವು ಏನೇನು ಆ ಕುರಿತು ಮಾಡಿದ್ದೇವೆ, ಸಾರ್ವಜನಿಕರ ಹಿತದೃಷ್ಟಿಯಿಂದ ಏನೇನು ಕಾನೂನುಗಳನ್ನು ತಂದಿದ್ದೇವೆ, ಅಕ್ರಮಗಳನ್ನು ತಡೆಗಟ್ಟಲು ಏನೇನು ಮಾಡಿದ್ದೇವೆ, ಇದನ್ನು ನೀವೇಕೆ ತಪ್ಪಿಸಿದ್ದೀರಿ, ಅದರಿಂದಾಗಿ ಏನಾಗಿದೆ ಮುಂತಾಗಿ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಚರ್ಚೆ ಮಾಡಿ ಸ್ವಾಮಿ........

ಶ್ರೀ ಯು.ಆರ್.ಸಭಾಪತಿ:- ಅಧ್ಯಕ್ಷರೇ, ತಾವು ರೂಲಿಂಗ್ ಕೊಡಿ.

(ಗೊಂದಲ)

ಅಧ್ಯಕ್ಷರು:- ಅಧ್ಯಕ್ಷರು ಎದ್ದುನಿಂತು ಮಾತನಾಡುವಾಗ ದಯವಿಟ್ಟು ಸುಮ್ಮನಿರಿ you can't order like that I am very sorry, please stop. ಕೊಡಬಾರದು ಎಂದು ನೀವು 40-50 ಸದಸ್ಯರು ಹೇಳಿದ್ದೆಲ್ಲಾ ನಾನು ಕೇಳಿದ್ದೇನೆ, ನಾನು ಮಾತನಾಡಲು ನೀವು ಆಸ್ಪದ ಕೊಡದಿದ್ದರೆ ಹೇಗೆ? ಇದು ನನಗೆ ಅರ್ಥವಾಗುತ್ತಿಲ್ಲ. ಈಗ ನಾನು ರೂಲಿಂಗ್ ನೀಡುತ್ತಿದ್ದೇನೆ.

8) ಅಧ್ಯಕ್ಷರ ತೀರ್ಪು:

ವಿಷಯ: ಛಾಪಾ ಕಾಗದದ ಹಗರಣಕ್ಕೆ ಸಂಬಂಧಪಟ್ಟಂತೆ.

ಅಧ್ಯಕ್ಷರು:- ಶ್ರೀ ಜಗದೀಶ್ ಶೆಟ್ಟರ್, ವಿರೋಧ ಪಕ್ಷದ ನಾಯಕರು ಹಾಗೂ ಇತರರು, "ಕರ್ನಾಟಕ ರಾಜ್ಯದ ಆರ್ಥಿಕ ಶಿಸ್ತನ್ನೇ ಅಲುಗಾಡಿಸುವಂತಹ ನಕಲಿ ಛಾಪಾ ಕಾಗದದ ಹಗರಣವಾಗಿದ್ದು, ಇದರಲ್ಲಿ ಹಲವಾರು ಸಾವಿರ ಕೋಟಿ ರೂಪಾಯಿಗಳ ವಂಚನೆ ನಡೆದಿದೆ. ಈ ಹಗರಣದಲ್ಲಿ ಬಹಳಷ್ಟು ಪ್ರಭಾವಿ ವ್ಯಕ್ತಿಗಳು ಶಾಮೀಲಾಗಿರುವುದೂ ಸಹ ತಿಳಿದು ಬಂದಿದೆ. ಈ ಅವ್ಯವಹಾರವು ನಮ್ಮ ರಾಜ್ಯಕ್ಕಷ್ಟೇ ಸೀಮಿತವಾಗಿರದೆ ಇತರೆ ಐದಾರು ರಾಜ್ಯಗಳಿಗೂ ವಿಸ್ತರಿಸಿದೆ" ಎಂಬ ಗಂಭೀರ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ನೀಡಿದ್ದಾರೆ.

ಈ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಹಾಗೂ ಸರ್ಕಾರದ ಅಭಿಪ್ರಾಯವನ್ನು ಆಲಿಸಿದ್ದೇನೆ.

ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಇದು ಉಚ್ಚ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಯಲ್ಲಿ ಇರುವುದರಿಂದ, ಈ ಹಂತದಲ್ಲೇ ಸದನದಲ್ಲಿ ಈ ವಿಚಾರವನ್ನು ಚರ್ಚಿಸುವುದು ಸಬ್-ಜುಡೀಸ್ ಆಗುವ ಪ್ರಯುಕ್ತ ಸದಸ್ಯರು ನೀಡಿರುವ ನಿಲುವಳಿ ಸೂಚನೆಯನ್ನು ಅಂಗೀಕರಿಸಲು ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ.

ಈಗ ಸದನವನ್ನು 2 ಘಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 12-42ಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2099 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು- ಸಭಾಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)